


ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಾಲುಗೋಣ ಮಜುರೆ ಬಿ.ಪಾಳ್ಯದ ಸಿದ್ಧರಾಮೇಶ್ವರ ಶ್ರವಣ ದೋಷ ವಸತಿ ಶಾಲೆ ಮಕ್ಕಳಿಗೆ ಬೆಂಗಳೂರಿನ ಧೃವತಾರೆ ಚಾರಿಟಬಲ್ ಟ್ರಸ್ಟ್‌ನಿಂದ ಆಹಾರ ಕಿಟ್ ನೀಡಲಾಯಿತು. ಸಂಸ್ಥೆ ಅಧ್ಯಕ್ಷ ಚಂದ್ರಶೇಖರಯ್ಯ, ರಾಣೆಬೆನ್ನೂರು ಸೇವಾ ಅಂಧರ ಸಂಸ್ಥೆಯ ಎಚ್‌.ಆರ್‌. ಶಿವಕುಮಾರ್, ಧೃವತಾರೆ ಟಾರಿಟಬಲ್ ಟ್ರಸ್ಟ್ ಅಧ್ಯಕ್ಷ ಸೋಮಶೇಖರ್, ಉಪಾಧ್ಯಕ್ಷ ಕೋದಂಡರಾಮಯ್ಯ, ನಿರ್ದೇಶಕರಾದ ಹರೀಶ್‌ರಾವ್ ಇದ್ದರು



29/08/2021 ಪ್ರಜಾವಾಣಿ

# ಸದ್ದಿಲ್ಲದೆ ವಿಕಲಚೇತನ ಮಕ್ಕಳಿಗೆ ಮಾತು ಕಲಿಸುತ್ತಿರುವ ಶಾಲೆ

**ಚಿಕ್ಕನಾಯಕನಹಳ್ಳಿ:** ದುಡ್ಡು ಕೊಟ್ಟರೇ ಬೇಕಾದು ಸಿಗುತ್ತದೆ ಈ ಜಾಗದಾಗ, ಆದರೆ ಒಂದು ನಯಾಪೈಸೆ ಪಡೆಯದೇ ಪ್ರೀತಿ, ಕರುಣೆ, ಸ್ನೇಹ ಜೊತೆಯಲ್ಲಿ ಶಿಕ್ಷಣವನ್ನು ಬಡ ವಿಕಲಚೇತನ ಮಕ್ಕಳಿಗೆ ದೊರೆಯುತ್ತಿರುವುದು ವಿಶೇಷವಾಗಿದೆ.

ವಯಸ್ಸಾದ ತಂದೆ, ತಾಯಿ ಸಹಕಾರದೊಂದಿಗೆ ಸಿದ್ದೇಶ್ ಎಂಬ ಯುವಕನ ಸಮಾಜಮುಖಿ ಸೇವೆ. ತಾಲೂಕಿನ ಹಾಲುಗೋಣ ಸಮೀಪವಿರುವ ಶ್ರೀ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣದೋಷ ಮಕ್ಕಳ ವಸತಿ ಶಾಲೆ ಕಳೆದ 4 ವರ್ಷಗಳಿಂದ ಮಾತು ಬಾರದವರ ಹಾಗೂ ಕಿವಿ ಕೇಳದ ಮಕ್ಕಳಿಗೆ ಉಚಿತ ಶಿಕ್ಷಣ, ವಸತಿ ಜೊತೆ ಮಕ್ಕಳಿಗೆ ಸಂಸ್ಕಾರವನ್ನು ಕಲಿಸಿಕೊಂಡು ಬರುತ್ತಿದೆ. ತಿಪಟೂರು, ತುರುವೇಕೆರೆ, ಗುಬ್ಬಿ ಭಾಗದಲ್ಲಿನ ಅಂಗವಿಕಲ 30 ಜನ ವಿದ್ಯಾರ್ಥಿಗಳು ಇಲ್ಲಿ ತಮ್ಮ ಭವಿಷ್ಯ ರೂಪಿಸಿಕೊಳ್ಳಲು ವಿದ್ಯಾಭ್ಯಾಸ ಮಾಡುವ ಮೂಲಕ ಕನಸು ಕಾಣುತ್ತಿದ್ದಾರೆ. ಮಾತು ಬಾರದ ಕೆಲ ಮಕ್ಕಳು ಈ ಶಾಲೆಗೆ ದಾಖಲಾಗಿ ಅಲ್ಪ ಸ್ವಲ್ಪ ಮಾತುಗಳನ್ನು ಕಲಿಯುತ್ತಿದ್ದಾರೆ. ಕೆಲ ಎನ್.ಜಿ.ಓ ಹಾಗೂ ಕೆಲ ದಾನಿಗಳ ಸಹಾಯದಿಂದ ಈ ಶಾಲೆ ಮುಂದುವರೆಯುದೆ.

**ಸನ್ನೆ ಮಾಡಿದರೆ ಸಾಕು 1000 ಪದ :**

ಈ ಶಾಲೆಯ ಮಕ್ಕಳು ಕಿವುಡು ಹಾಗೂ ಮೂಗತನ ನ್ಯೂನ್ಯತೆ ಹೊಂದಿದ್ದರು ಸಹ ಶಿಕ್ಷಕರ ಹಾಗೂ ಸಿಬ್ಬಂದಿಗಳ ಸತತ ಪ್ರಯತ್ನದಿಂದ ಸನ್ನೆ ಮಾಡಿ ತಿಳಿಸಿದರೆ ಸಾಕು ಕ್ಲಿಷ್ಟಕರ ಪದವನ್ನು ಸಹ ಅಂದವಾಗಿ ತಪ್ಪಿಲ್ಲದೆ ಇಂಗ್ಲಿಷ್ ಹಾಗೂ ಕನ್ನಡ ಬಾಷೆಯಲ್ಲಿ ಬರೆಯುತ್ತಾರೆ. ಡ್ಯಾನ್ಸ್, ಹಾಡು , ನಾಟಕ, ಕ್ರೀಡೆ ಸೇರಿದಂತೆ ಇತತ ಚಟುವಟಿಕೆಯಲ್ಲಿ ಆಸಕ್ತಿಯಿಂದ ಕಲಿಯುತ್ತಿದ್ದಾರೆ.

**ಸಮಾಜಕ್ಕೆ ಏನಾದರು ಮಾಡಬೇಕು :**

ಈ ಶಾಲೆಯ ಸ್ಥಾಪಕ ಹಾಗೂ ಮೇಲ್ವಿಚಾರಕ



ತಾಲೂಕಿನ ಹಾಲುಗೋಣ ಸಮೀಪವಿರುವ ಶ್ರೀ ಸಿದ್ದರಾಮೇಶ್ವರ ವಾಕ್ ಮತ್ತು ಶ್ರಮವದೋಷ ಮಕ್ಕಳ ಶಾಲೆಯಲ್ಲನ ಮಕ್ಕಳ ಚಟುವಟಿಕೆ .

ಸಿದ್ದೇಶ್ ಸ್ಪೆಷಲ್ ಡಿಎಡ್ ವಿದ್ಯಾಭ್ಯಾಸ ಮುಗಿಸಿ, ವಿವಿಧ ಕಡೆ ಉದ್ಯೋಗವನ್ನು ನಿರ್ವಹಿಸಿ ಒಳ್ಳೆಯ ಸಂಬಳ ಪಡೆಯುತ್ತಿದ್ದರು. ಆದರೇ ಸಮಾಜಕ್ಕೆ ಏನಾದರು ಕೊಡುಗೆ ಕೊಡಬೇಕು ಎಂಬ ಉದ್ದೇಶದಿಂದ 2016ರಲ್ಲಿ ಶ್ರೀ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣ ದೋಷ ಮಕ್ಕಳ ಉಚಿತ ವಸತಿ ಶಾಲೆಯನ್ನು ಪ್ರಾರಂಭ ಮಾಡಿದರು. ಅನೇಕ ಅಡೆ ತಡೆಗಳು ಬಂದರು ಸಹ ಅವುಗಳನ್ನು ಎದುರಿಸಿಕೊಂಡು ಶಾಲೆಯನ್ನು ನಡೆಸುತ್ತಿದ್ದಾರೆ. ಮೂಖಿ ಹಾಗೂ ಕಿವುಡ ಮಕ್ಕಳನ್ನು ಸಮಾಜದಲ್ಲಿ ಸಮಾನರನ್ನಾಗಿ ಮಾಡುವ ಕೆಲಸ ನನಗೆ ತೃಪ್ತಿ ನೀಡುತ್ತಿದೆ, ಅನೇಕ ಸಾರ್ವಜನಿಕರು ಈ ಶಾಲೆ ನಡೆಸಲು ಸಹಕಾರ ನೀಡುತ್ತಿದ್ದಾರೆ. ನೂತನ ಕಟ್ಟಡ ನಿರ್ಮಾಣವಾಗುತ್ತಿದ್ದು ಕೆಲ ದಿನಗಳಲ್ಲಿಯೇ ಕಟ್ಟಡವನ್ನು ಉದ್ಘಾಟನೆ ಮಾಡಲಾಗುತ್ತದೆ ಎಂದರು

**ತಂದೆ-ತಾಯಿಯ ಸಹಕಾರ ಹೆಚ್ಚು :**

ಸಿದ್ದೇಶ್‌ರವರ ಕುಟುಂಬ ಆರ್ಥಿಕವಾಗಿ ಹೇಳಿಕೊಳ್ಳುವಷ್ಟು ಸದೃಢವಾಗಿಲ್ಲವಾದರು ಸಹ ತಮ್ಮ ವೈಯಕ್ತಿಕ ಹಣದಿಂದ ಈ ಶಾಲೆಯನ್ನು ನಡೆಸುತ್ತಿದ್ದಾರೆ, ತಂದೆ ಶಾಂತಪ್ಪ, ತಾಯಿ ಶಾಂತಮ್ಮರವರು ತಮ್ಮ ಸಂಪೂರ್ಣ ಸಹಕಾರವನ್ನು ಶಾಲೆಗೆ ನೀಡುವ ಜೊತೆಗೆ ತಾವು ಕುದ್ದಾಗಿ ಇಲ್ಲಿನ ಮಕ್ಕಳಿಗೆ ನೀತಿ ಪಾಠ, ಕಥೆಗಳು ಹಾಗೂ ಸಂಸ್ಕಾರವನ್ನು ಕಲಿಸಿಕೊಡುತ್ತಿದ್ದಾರೆ.

**ನೆರವು ಅಗತ್ಯವಿದೆ :**

ಎಲ್ಲಾ ಸರಿಯಾಗಿರುವ ಮಕ್ಕಳನ್ನು ಸಾಕುವುದೇ ಕಷ್ಟ ಎಂಬುವವರ ಮಧ್ಯೆ ತಿಳುವಳಿಕೆ, ಮಾತು ಹಾಡದ, ಕಿವಿ ಕೇಳದ ಮಕ್ಕಳನ್ನು ಸಾಕುವುದರ ಜೊತೆ ತರಬೇತಿ ಶಿಕ್ಷಣ ನೀಡುವುದು ಎಷ್ಟು ಕಷ್ಟ ಎಂಬುವುದು ಯೋಚನೆ ಮಾಡಬೇಕಿದೆ, ಅನೇಕರು ತಮ್ಮ ಕೈಲಾದ ಸಹಾಯವನ್ನು ಮಾಡಿದ್ದಾರೆ, ಇನ್ನೂ ಕೆಲವರು ಈ ಶಾಲೆಯಲ್ಲಿ ತಮ್ಮ ಹುಟ್ಟುಹಬ್ಬವನ್ನು ಆಚರಿಸಿಕೊಂಡು ಪೆನ್ನು, ಪುಸ್ತಕ, ಸೇರಿದಂತೆ ಇತರ ವಸ್ತುಗಳನ್ನು ನೀಡುತ್ತಿದ್ದಾರೆ. ಸರ್ಕಾರ ಹಾಗೂ ಅಧಿಕಾರಿ ವರ್ಗ ಇಂತಹ ಶಾಲೆಗೆ ಅನುಧಾನ ನೀಡುವ ಮೂಲಕ ಬಡವರ ವಿಕಲಚೇತನ ಮಕ್ಕಳ ಬಾಳಿಗೆ ಬೆಳಕಾಗಬೇಕಿದೆ. ಸಾರ್ವಜನಿಕರೆ ಹಾಗೂ ಅಧಿಕಾರಿಗಳೆ ತಮ್ಮ ಬಿಡುವಿನ ಸಮಯದಲ್ಲಿ ಇಂತಹ ಶಾಲೆಗಳಿಗೆ ಬೇಟಿ ನೀಡಿ, ವಿಕಲಚೇತನ ಮಕ್ಕಳಿಗೆ ಮಾರ್ಗದರ್ಶನ ನೀಡುವ ಮೂಲಕ ತಮ್ಮ ಕೈಲಾದ ಸಹಾಯವನ್ನು ನೀಡಿ ಮಕ್ಕಳ ಜೀವನಕ್ಕೆ ಬೆಳಕಾಗಿ ಎಂಬುವುದೆ ಈ ವರದಿಯ ಆಶಯವಾಗಿದೆ.

ನನ್ನ ಮಗ ಸಿದ್ದೇಶ್ ಈ ಶಾಲೆಯನ್ನು ಪ್ರಾರಂಭಿಸಲು ನನ್ನ ಜೊತೆ ಚರ್ಚೆ ಮಾಡಿದ್ದಾಗ ನನಗೆ ಖುಷಿಯಾಯಿತು. ದೇಹದ ಅಂಗಾಂಗ ಸರಿ ಇರುವವರಿಗೆ ಶಿಕ್ಷಣ ನೀಡಿ ಬುದ್ದಿವಂತರನ್ನಾಗಿ ಮಾಡುವುದು ದೊಡ್ಡ ವಿಷಯವಲ್ಲ. ಅಂಗವೈಕಲ್ಯತೆ ಇರುವ ಮಕ್ಕಳಿಗೆ ಶಿಕ್ಷಣ ನೀಡುವುದು ನಿಜವಾದ ಸಾಧನೆ, ಇಂತಹ ಕೆಲಸವನ್ನು ಮಾಡುತ್ತಿರುವ ನನ್ನ ಮಗನ ಬಗ್ಗೆ ನನಗೆ ಹೆಮ್ಮೆ ಇದೆ. ಕೆಲವರ ಸಹಕಾರದಿಂದ ಈ ಶಾಲೆ ನೆಡೆದುಕೊಂಡು ಹೋಗುತ್ತಿದೆ. ನಮ್ಮ ಸಂಪೂರ್ಣ ಸಹಕಾರವೂ ಸಹ ನನ್ನ ಮಗನಿಗಿದೆ


ಶಾಂತಮ್ಮ . ಸಿದ್ದೇಶ್ ತಾಯಿ.

---

ಇಂತಹ ಶಾಲೆಗೆ ಸರಕಾರ ಮೂಲಭೂತ ಸೌಕರ್ಯವನ್ನು ನೀಡಬೇಕಿದೆ. ಇಲ್ಲಿನ ಮಕ್ಕಳು ತುಂಬ ಚಟುವಟಿಕೆಯಿಂದ ಕೂಡಿದ್ದು, ಶಿಕ್ಷಣದಲ್ಲಿ ಅಪಾರ ಆಸಕ್ತಿ ಹೊಂದಿದ್ದಾರೆ. ಮುಂದಿನ ದಿನಗಳಲ್ಲಿ ದೊಡ್ಡ ಶಾಲೆಯಾಗಿ ಮುಂದುವರೆಯುವುದರಲ್ಲಿ ಅನುಮಾನವಿಲ್ಲ

ರಾಕೇಶ್ ಸಿದ್ದರಾಮನಗರ.

# ವಿಶ್ವ ಶ್ರವಣ ದೋಷ ಮಕ್ಕಳ ದಿನ



ಚಿಕ್ಕನಾಯಕನಹಳ್ಳಿ: ತಾಲೂಕಿನ ಹಾಲುಗೊಣ ಮಜರೆ ಬಿ ಹಾಳ್ಯದಲ್ಲಿರುವ ಸಿದ್ಧರಾಮೇಶ್ವರ ಶ್ರವಣ ದೋಷ ಮಕ್ಕಳ ವಸತಿ ಶಾಲೆಯಲ್ಲಿ ಯಶಸ್ವಿನಿ ಎಜುಕೇಷನ್ ಸೊಸೈಟಿ ವತಿಯಿಂದ ವಿಶ್ವ ಶ್ರವಣ ದೋಷ ಮಕ್ಕಳ ದಿನ ಆಚರಿಸಲಾಯಿತು.


ಗೋಡೆಕೆರೆಯ ಚರ ಸಿದ್ಧೇಶ್ವರ ಮಠದ ಶ್ರೀ ಡಾ.ಮೃತ್ಯುಂಜಯ ದೇಶೀಕೇಂದ್ರ ಶಿವಯೋಗೀಶ್ವರ ಮಹಾಸ್ವಾಮಿಗಳ ಪಾದ ಪೂಜೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ನಂತರ ಮಾತನಾಡಿದ ಶ್ರೀಗಳು ಈ ಶಾಲೆಯಲ್ಲಿ ಓದುತ್ತಿರುವ ಮಕ್ಕಳು ದೈವ ಸ್ವರೂಪಿಗಳಾಗಿದ್ದು, ದಿನದಿಂದ ದಿನಕ್ಕೆ ಸಿದ್ದೇಶ್ ಅವರ ಗಮನದಿಂದ ಮಕ್ಕಳು ಚುರುಕಾಗುತ್ತಿದ್ದಾರೆ. ಹುಟ್ಟಿದ ದಿನದಂದೆ ಮಕ್ಕಳ ಶ್ರವಣ ದೋಷ ಪತ್ತೆ ಮಾಡಿ ಸೂಕ್ತ ಚಿಕಿತ್ಸೆ ನೀಡಿದಲ್ಲಿ ನ್ಯೂನತೆ ಸರಿಪಡಿಸಬಹುದಾಗಿದೆ. ಶ್ರವಣ ದೋಷ ಶಾಪವಲ್ಲ ಹಲವು ಕಾರಣಗಳಿಂದ ಇದು ಕಾಣಿಸಿಕೊಳ್ಳಬಹುದು. ಬಹಳಷ್ಟು ಸಂದರ್ಭದಲ್ಲಿ ದೋಷ ನಿವಾರಣೆ ಸಾಧ್ಯವಾಗುತ್ತದೆ. ಪೋಷಕರು ತಮ್ಮ ಮಕ್ಕಳ ಶ್ರವಣ ಪರೀಕ್ಷೆ ಮಾಡಿಸಿಕೊಂಡು ಆರಂಭದಲ್ಲೇ ಸಮಸ್ಯೆ ಬಗೆಹರಿಸಿಕೊಳ್ಳಬೇಕೆಂದು ಸಲಹೆ ನೀಡಿದರು.

ಮುಖ್ಯ ಶಿಕ್ಷಕ ಸಿದ್ದೇಶ್, ಸಹ ಶಿಕ್ಷಕರಾದ ಸಂಧ್ಯಾಶ್ರೀ, ಶಿಲ್ಪ, ಅನುಷಾ, ಶೈಲಜಾ, ಶಾಲಿನಿ, ಲಾವಣ್ಯ, ಪ್ರೇಮಾಶ್ರೀ, ಸೇರಿದಂತೆ ದಿವ್ಯಾಂಗ ಮಕ್ಕಳು ಹಾಜರಿದ್ದರು.

9-2-2020.

ಸುವರ್ಣ ಸಂಭ್ರಮ
ಉದಯವಾಣಿ
1970 ರಿಂದ
ನಮ್ಮ ಹೃದಯವಾಣಿ - ನಮ್ಮ ಉದಯವಾಣಿ



ಮುಂಬೈನಲ್ಲಿ ನಡೆದ ರಾಷ್ಟ್ರಮಟ್ಟದ ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಯಲ್ಲಿ ಚಿಕ್ಕನಾಯಕನಹಳ್ಳಿ ತಾಲೂಕಿನ ಹಾಲುಗೊಣ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣ ದೋಷ ವಸತಿ ಶಾಲೆ ಮಕ್ಕಳು ಬಹುಮಾನ ಪಡೆದಿದ್ದಾರೆ.

# ಕ್ರೀಡಾ ಸ್ಪರ್ಧೆ: ಬಹುಮಾನ

ಚಿಕ್ಕನಾಯಕನಹಳ್ಳಿ: ಮುಂಬೈನಲ್ಲಿ ನಡೆದ ರಾಷ್ಟ್ರಮಟ್ಟದ ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಗಳಲ್ಲಿ ತಾಲೂಕಿನ ಹಾಲುಗೊಣ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣ ದೋಷ ವಸತಿ ಶಾಲೆ ಮಕ್ಕಳು ಭಾಗವಹಿಸಿ ಬಹುಮಾನ ಪಡೆದಿದ್ದಾರೆ.

ಫೆ.3 ರಿಂದ 5 ರವರೆಗೆ ಮುಂಬೈನಲ್ಲಿ ಸ್ಪೈಲೋ ಒಲಂಪಿಯಾಡ್ ಸಂಸ್ಥೆ ಆಯೋಜಿಸಿದ್ದ ರಾಷ್ಟ್ರಮಟ್ಟದ ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಯಲ್ಲಿ 15 ಮಕ್ಕಳು ಭಾಗವಹಿಸಿದ್ದರು. ಮಕ್ಕಳ ಸಾಧನೆಗೆ ಶಾಲೆ ಮೇಲ್ವಿಚಾರಕ ಸಿದ್ದೇಶ್, ಅಧ್ಯಕ್ಷೆ ಚಂದ್ರಮ್ಮ ಶಿಕ್ಷಕಿಯರಾದ ಅನುಷಾ, ಶಿಲ್ಪಾ ಶುಭಕೋರಿದ್ದಾರೆ.

ಯುವಕ ಸಿದ್ದೇಶ್ ಸಮಾಜಮುಖಿ ಸೇವೆ ವಿದ್ಯಾವಂತರಿಗೆ ಮಾದರಿ ■ 4 ವರ್ಷಗಳಿಂದ ಮಾತು ಬಾರದ ಹಾಗೂ ಕಿವಿ ಕೇಳದ ಮಕ್ಕಳಿಗೆ ಉಚಿತ ಶಿಕ್ಷಣ

# ಬಡ ದಿವ್ಯಾಂಗ 30 ವಿದ್ಯಾರ್ಥಿಗಳಿಗೆ ಯುವಕನಿಂದ ಉಚಿತ ವಿದ್ಯಾದಾನ

• ಚೇತನ್

ಚಿಕ್ಕನಾಯಕನಹಳ್ಳಿ: ಮಕ್ಕಳಿಗೆ ಪ್ರಾಮುಖ್ಯತೆ ನೀಡುವ ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದ ... ಕರುಣೆ, ಪ್ರೀತಿಯಿಂದ ಬಡ ದಿವ್ಯಾಂಗ ಮಕ್ಕಳಿಗೆ ಶಿಕ್ಷಣ ನೀಡುತ್ತಿರುವ ಯುವಕ ಸಿದ್ದೇಶ್ ಅವರ ಸಮಾಜಮುಖಿ ಸೇವೆ ವಿದ್ಯಾವಂತರಿಗೆ ಮಾದರಿಯಾಗಿದೆ.

ತಾಲೂಕಿನ ಹಾಲುಗೋಣ ಸಮೀಪದಲ್ಲಿರುವ ಸ್ವಂತ ಮನೆಯಲ್ಲೇ ನಡೆಸುತ್ತಿರುವ ಶ್ರೀ ಸಿದ್ಧರಾಮೇಶ್ವರ ವಾಕ್ ಮತ್ತು ಶ್ರವಣದೋಷ ಮಕ್ಕಳ ವಸತಿ ಶಾಲೆ 4 ವರ್ಷಗಳಿಂದ ಮಾತು ಬಾರದ ಹಾಗೂ ಕಿವಿ ಕೇಳದ ಮಕ್ಕಳಿಗೆ ಉಚಿತ ಶಿಕ್ಷಣ, ವಸತಿ ಜೊತೆಗೆ ಮಕ್ಕಳಿಗೆ ಸಂಸ್ಕಾರ ಕಲಿಸುತ್ತಿದೆ. ತಿಪಟೂರು, ತುರುವೇಕೆರೆ, ಗುಬ್ಬಿ ಭಾಗದ ದಿವ್ಯಾಂಗ 30 ವಿದ್ಯಾರ್ಥಿಗಳು ವಿದ್ಯೆ ಕಲಿಯುತ್ತಿದ್ದು, ಮಾತು ಬಾರದ ಕೆಲ ಮಕ್ಕಳು ಶಾಲೆಗೆ ದಾಖಲಾಗಿ ಅಲ್ಪಸ್ವಲ್ಪ ಮಾತು ಕಲಿಯುತ್ತಿದ್ದಾರೆ. ಕೆಲ ಎನ್‌ಜಿಒ ಹಾಗೂ ಕೆಲ ದಾನಿಗಳ ಸಹಾಯದಿಂದ ಶಾಲೆ ನಡೆಯುತ್ತಿದೆ.



ಚಿಕ್ಕನಾಯಕನಹಳ್ಳಿ ತಾಲೂಕಿನ ಹಾಲುಗೋಣ ಸಮೀಪವಿರುವ ಶ್ರೀ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣದೋಷ ಮಕ್ಕಳ ಶಾಲೆಯಲ್ಲಿ ಮಕ್ಕಳಿಗೆ ಕಲಿಸುತ್ತಿರುವುದು.

**ಸನ್ನೆ ಮಾಡಿದರೆ 1000 ಪದ ಹೇಳ್ತಾರೆ:** ಶಾಲೆ ಮಕ್ಕಳು ಕಿವುಡು ಹಾಗೂ ಮಾತು ಬಾರದಿದ್ದರೂ ಸನ್ನೆ ಮಾಡಿ ವಸ್ತು, ವಿಷಯದ ಬಗ್ಗೆ ತಿಳಿಸಿದರೆ ತಪ್ಪಿಲ್ಲದೆ ಇಂಗ್ಲಿಷ್ ಹಾಗೂ ಕನ್ನಡ ಭಾಷೆಯಲ್ಲಿ ಬರೆಯುತ್ತಾರೆ. ಡ್ಯಾನ್ಸ್, ಹಾಡು, ನಾಟಕ, ಕ್ರೀಡೆ ಸೇರಿ ಇತರ ಚಟುವಟಿಕೆಯಲ್ಲೂ ಮುಂದಿದ್ದಾರೆ. ಶಾಲೆ ಸ್ಥಾಪಕ ಹಾಗೂ ಮೇಲ್ವಿಚಾರಕ ಸಿದ್ದೇಶ್ ಸ್ಪೆಷಲ್ ಡಿ.ಎಡ್ ವಿದ್ಯಾಭ್ಯಾಸ ಮುಗಿಸಿ, ವಿವಿಧ ಕಡೆ ಉದ್ಯೋಗ ನಿರ್ವಹಿಸಿ ಒಳ್ಳೆಯ ಸಂಬಳ ಪಡೆಯುತ್ತಿದ್ದರು. ಆದರೆ ಸಮಾಜಕ್ಕೆ ಏನಾದರೂ ಕೊಡುಗೆ ಕೊಡಬೇಕು ಎಂಬ ಉದ್ದೇಶದಿಂದ 2016ರಲ್ಲಿ ಶ್ರೀ ಸಿದ್ಧರಾಮೇಶ್ವರ ವಾಕ್ ಮತ್ತು ಶ್ರವಣ ದೋಷ ಮಕ್ಕಳ ಉಚಿತ ವಸತಿ ಶಾಲೆ ಪ್ರಾರಂಭಿಸಿದರು. ಅನೇಕ ಅಡೆ-ತಡೆಗಳು ಬಂದರೂ ಎದುರಿಸಿಕೊಂಡು ಶಾಲೆ ನಡೆಸುತ್ತಿದ್ದಾರೆ. ಮೂಕ ಹಾಗೂ ಕಿವುಡ ಮಕ್ಕಳು ಸಮಾಜದಲ್ಲಿ ಗುರುತಿಸಿಕೊಳ್ಳುವಂತೆ ಮಾಡುತ್ತಿರುವ ಕೆಲಸ ತೃಪ್ತಿ ನೀಡುತ್ತಿದೆ. ಸಾರ್ವಜನಿಕರು ಶಾಲೆ ನಡೆಸಲು ಸಹಕಾರ ನೀಡುತ್ತಿದ್ದಾರೆ. ನೂತನ ಕಟ್ಟಡ ನಿರ್ಮಾಣವಾಗುತ್ತಿದ್ದು, ಕೆಲ ದಿನಗಳಲ್ಲಿಯೇ ಕಟ್ಟಡ ಉದ್ಘಾಟನೆಯಾಗುತ್ತದೆ ಎನ್ನುತ್ತಾರೆ ಸಿದ್ದೇಶ್.

**ಹೆತ್ತವರ ಸಹಕಾರ ಹೆಚ್ಚು:** ಸಿದ್ದೇಶ್ ಕುಟುಂಬ ಆರ್ಥಿಕವಾಗಿ ಹೇಳಿಕೊಳ್ಳುವಷ್ಟು ಸದೃಢವಾಗಿಲ್ಲವಾದಿದ್ದರೂ ವೈಯಕ್ತಿಕವಾಗಿ, ಕೆಲವರ ಸಹಕಾರದಿಂದ ಶಾಲೆ ನಡೆಸುತ್ತಿದ್ದಾರೆ. ತಂದೆ ಶಾಂತಪ್ಪ, ತಾಯಿ ಶಾಂತಮ್ಮ ಮಕ್ಕಳಿಗೆ ನೀತಿ ಪಾಠ, ಕಥೆಗಳು ಹಾಗೂ ಸಂಸ್ಕಾರ ಕಲಿಸುತ್ತಿದ್ದಾರೆ. ಮಕ್ಕಳಿಗೆ ಊಟ, ತಿಂಡಿ ಎಲ್ಲಾ ವ್ಯವಸ್ಥೆ ಮಾಡಲಾಗಿದೆ. ಅಡುಗೆ ತಯಾರಿಸಲು ಸಿಬ್ಬಂದಿಯೂ ಇದ್ದಾರೆ.

> ಇಂತಹ ಶಾಲೆಗೆ ಸರ್ಕಾರ ಮೂಲಸೌಕರ್ಯ ನೀಡಬೇಕಿದೆ. ಇಲ್ಲಿ ಕಲಿಯುತ್ತಿರುವ ಮಕ್ಕಳು ಚುರುಕಾಗಿಯೇ ಇದ್ದು, ಶಿಕ್ಷಣದಲ್ಲಿ ಅಪಾರ ಆಸಕ್ತಿ ಹೊಂದಿದ್ದಾರೆ. ಮುಂದಿನ ದಿನಗಳಲ್ಲಿ ದೊಡ್ಡ ಶಾಲೆಯಾಗಿ ಮುಂದುವರೆಯುವುದರಲ್ಲಿ ಅನುಮಾನವಿಲ್ಲ.
>
> • ರಾಕೇಶ್, ಸಿದ್ಧರಾಮನಗರ

> ದಿವ್ಯಾಂಗರಿದ್ದರೂ ಮಕ್ಕಳು ಚುರುಕಾಗಿಯೇ ಇದ್ದಾರೆ. ಸಮರ್ಪಕ ದಾಖಲೆ ಇಟ್ಟುಕೊಂಡು ಶಾಲೆ ನಡೆಯುತ್ತಿದೆ. ಆದರೆ ಅನುದಾನ ರಹಿತ ಶಾಲೆ ಆಗಿರುವುದರಿಂದ ಸರ್ಕಾರದಿಂದ ಯಾವುದೇ ಸೌಲಭ್ಯ ನೀಡಲು ಸಾಧ್ಯವಿಲ್ಲ.
>
> • ಕಾತ್ಯಾಯಿನಿ, ಕ್ಷೇತ್ರ ಶಿಕ್ಷಣಾಧಿಕಾರಿ

# ಮುಂಬೈನ 2020ನೇ ಸೈಲೊ ಒಲಂಪಿಯಾಡ್‌ನಲ್ಲಿ ಭಾಗವಹಿಸಿದ ವಾಕ್ ಮತ್ತು ಶ್ರವಣದೋಷ ಮಕ್ಕಳು




ಚಿಕ್ಕನಾಯಕನಹಳ್ಳಿ: ಸಾಧನೆಗೆ ಅಂಗವೈಕಲ್ಯ ಮುಖ್ಯವಲ್ಲ ಎಲ್ಲರಲ್ಲಿಯೂ ಒಂದೊಂದು ಪ್ರತಿಭೆಯನ್ನು ಆ ದೇವರು ನೀಡಿರುತ್ತಾನೆ ಅದನ್ನು ವ್ಯಕ್ತಪಡಿಸಲು ಸರಿಯಾದ ವೇದಿಕೆ ಅಗತ್ಯ ಅಂತಹ ವೇದಿಕೆಯನ್ನು ಮುಂಬೈನಲ್ಲಿ ಕಲ್ಪಿಸಲಾಗಿತ್ತು ಅದರಲ್ಲಿ ನಮ್ಮ ಶಾಲೆಯ ಮಕ್ಕಳು ಉತ್ತಮ ಪ್ರದರ್ಶನ ನೀಡಿ ನಮ್ಮ ತಾಲ್ಲೂಕಿಗೆ ಕೀರ್ತಿ ತಂದಿದ್ದಾರೆ ಎಂದು ಯಶಸ್ವಿನಿ ಯುಜುಕೇಶನ್ ಸೊಸೈಟಿ ಅಧ್ಯಕ್ಷರಾದ ಚಂದ್ರಮ್ಮ ಚಂದ್ರಶೇಖರಯ್ಯ ತಿಳಿಸಿದರು.

ತಾಲ್ಲೂಕಿನ ಹಾಲುಗೊಣಗ್ರಾಮದ ಶ್ರೀ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣದೋಷ ಮಕ್ಕಳ ವಸತಿ ಶಾಲೆಯ ಮಕ್ಕಳು ಇದೇ ತಿಂಗಳ 3ರಿಂದ 5ರವರೆಗೆ ಮುಂಬೈನಲ್ಲಿ ರೌಂಡ್ ಟೇಬಲ್ 19 ಸಂಸ್ಥೆಯು ಆಯೋಜಿಸಿದ್ದ ಸೈಲೊ ಒಲಂಪಿಯಾಡ್ 2020ರಲ್ಲಿ ನಮ್ಮ ಸಂಸ್ಥೆಯ ಶ್ರೀ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣದೋಷ ಮಕ್ಕಳ ವಸತಿಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ತಮ್ಮ ಪ್ರತಿಭೆಯನ್ನು ತೋರಿಸಿದ್ದು ರಾಷ್ಟ್ರ ಮಟ್ಟದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ನಮ್ಮ ತಾಲ್ಲೂಕಿಗೆ ಕೀರ್ತಿ ತಂದಿದ್ದು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶಾಲೆಯವಿದ್ಯಾರ್ಥಿಗಳ ನೃತ್ಯವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು ಎಂದ ಅವರು ಈ ಸಾಧನೆಗೆ ಕಾರಣರಾದ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಸಿದ್ದೇಶ್ ಸಿಬ್ಬಂದಿಗಳಾದ ಸಂಜುಶ್ರೀ, ಶಿಲ್ಪ, ಅನುಷಾ ಇವರನ್ನು ಅಭಿನಂದಿಸಿದ್ದಾರೆ.

ವಿಜಯವಾಣಿ 11/02/2020

ತುಮಕೂರು ಮಿತ್ರ 10-2-20.

# ಮುಂಬೈನಲ್ಲಿ ಹಾಲುಗೊಣದ ವಸತಿ ಶಾಲೆ ಮಕ್ಕಳ ಸಾಧನೆ



ಮುಂಬೈನಲ್ಲಿ ರೌಂಡ್ ಟೇಬಲ್ 19 ಸಂಸ್ಥೆ ಆಯೋಜಿಸಿದ್ದ ಸೈಲೊ ಒಲಿಂಪಿಯಾಡ್-2020ರಲ್ಲಿ ಭಾಗವಹಿಸಿದ್ದ ಚಿಕ್ಕನಾಯಕನಹಳ್ಳಿ ತಾಲೂಕಿನ ಹಾಲುಗೊಣ ಗ್ರಾಮದ ಶ್ರೀ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣದೋಷ ಮಕ್ಕಳ ವಸತಿ ಶಾಲೆಯ ಮಕ್ಕಳು.

ಚಿಕ್ಕನಾಯಕನಹಳ್ಳಿ: ಮುಂಬೈನಲ್ಲಿ ರೌಂಡ್ ಟೇಬಲ್ 19 ಸಂಸ್ಥೆ ಇತ್ತೀಚೆಗೆ ಆಯೋಜಿಸಿದ್ದ ಸೈಲೊ ಒಲಿಂಪಿಯಾಡ್-2020ರಲ್ಲಿ ಭಾಗವಹಿಸಿ ಕ್ರೀಡೆ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಪ್ರತಿಭೆ ಪ್ರದರ್ಶಿಸಿದ ತಾಲೂಕಿನ ಹಾಲುಗೊಣದ ಶ್ರೀ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣದೋಷ ಮಕ್ಕಳ ವಸತಿ ಶಾಲೆಯ ಮಕ್ಕಳ ಸಾಧನೆಗೆ ಮೆಚ್ಚುಗೆ ವ್ಯಕ್ತವಾಗಿದೆ.

ಸಾಧನೆಗೆ ಅಂಗವೈಕಲ್ಯ ಮುಖ್ಯವಲ್ಲ, ಎಲ್ಲರಲ್ಲಿಯೂ ಒಂದೊಂದು ಪ್ರತಿಭೆಯನ್ನು ಆ ದೇವರು ನೀಡಿರುತ್ತಾನೆ. ಅದನ್ನು ವ್ಯಕ್ತಪಡಿಸಲು ಸರಿಯಾದ ವೇದಿಕೆ ಅಗತ್ಯ. ಇಂಥ ಅವಕಾಶ ಬಳಸಿಕೊಂಡು ಶಾಲೆಯ ಮಕ್ಕಳು ಉತ್ತಮ ಪ್ರದರ್ಶನ ನೀಡಿ ನಮ್ಮ ತಾಲೂಕಿಗೆ ಕೀರ್ತಿ ತಂದಿದ್ದಾರೆ ಎಂದು ಯಶಸ್ವಿನಿ ಎಜುಕೇಶನ್ ಸೊಸೈಟಿ ಅಧ್ಯಕ್ಷೆ ಚಂದ್ರಮ್ಮ ಚಂದ್ರಶೇಖರಯ್ಯ ಹೇಳಿದರು.

ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳ ಬಗ್ಗೆ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಸಿದ್ದೇಶ್, ಸಿಬ್ಬಂದಿ ನಂಜುಶ್ರೀ, ಶಿಲ್ಪಾ, ಅನುಷಾ ಮೆಚ್ಚುಗೆ ವ್ಯಕ್ತಪಡಿಸಿದರು.

# ಅಂಗವಿಕಲರಿಗೆ ಅವಕಾಶ ಕಲ್ಪಿಸಿ

## ಕಾನೂನು ಅರಿವು ನೆರವು ಕಾರ್ಯಕ್ರಮದಲ್ಲಿ ಪ್ರಧಾನ ಸಿವಿಲ್ ನ್ಯಾಯಾಧೀಶೆ ಎಂ.ಪ್ರಮೀಳಾ



ಹಾಲುಗೊಣದಲ್ಲಿ ವಿಶ್ವ ಅಂಗವಿಕಲರ ದಿನಾಚರಣೆಯನ್ನು ಹಿರಿಯ ನ್ಯಾಯಾಧೀಶೆ ಎಂ.ಪ್ರಮೀಳಾ ಉದ್ಘಾಟಿಸಿದರು.

ಚಿಕ್ಕನಾಯಕನಹಳ್ಳಿ: ಅಂಗವಿಕರಲ್ಲಿ ಭಗವಂತ ವಿಶಿಷ್ಟ ಚೇತನ್ಯ ಅಡಗಿಸಿರುತ್ತಾನೆ ಎಂದು ಪ್ರಧಾನ ಸಿವಿಲ್ ನ್ಯಾಯಾಧೀಶೆ ಎಂ.ಪ್ರಮೀಳಾ ತಿಳಿಸಿದರು.

ಅವರು ತಾಲೂಕಿನ ವಾಣಿ ಡಫ್ ಚಿಲ್ಡ್ರನ್ ಫೌಂಡೇಷನ್, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ತಾಲೂಕು ವಕೀಲರ ಸಂಘದ ಆಶ್ರಯದಲ್ಲಿ ಹಾಲುಗೊಣಲ್ಲಿ ನಡೆದ ವಿಶ್ವವಿಕಲಚೇತನ ದಿನ ಹಾಗೂ ವಿಶ್ವ ಮಾನವ ಹಕ್ಕುಗಳ ದಿನಾಚರಣೆ ಅಂಗವಾಗಿ ನಡೆದ ಕಾನೂನು ಅರಿವು ನೆರವುಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ವಿಕಲಚೇತನರಲ್ಲಿ ವಿಶಿಷ್ಟ ಚೈತನ್ಯ ಅಡಗಿದೆ. ಅವರ ಬಗ್ಗೆ ಕನಿಕರ ತೋರುವುದಕ್ಕಿಂತ ಅವರ ಚೈತನ್ಯದ ಉತ್ಸಾಹಕ್ಕೆ ಪ್ರೋತ್ಸಾಹ ನೀಡುವಂತಹ ಹೃದಯವಂತಿಕೆ ಬೆಳೆಸಿಕೊಳ್ಳಬೇಕಿದೆ ಎಂದರು.

ವಿಕಲಚೇ ತನರಿಗೆ ಸರ್ಕಾರ ದಿಂದದೊರೆಯುವಸೌಲಭ್ಯಗಳು ಸಿಗುವಂತಾಗಲು ಎಲ್ಲರೂ ಸಹಕರಿಸಬೇಕಿದೆ. ಇಂತಹ ಸೌಲಭ್ಯಗಳು ವಂಚಿತವಾಗುತ್ತಿದೆ ಎಂದು ತಿಳಿದು ಬಂದರೆ, ಕಾನೂನು ನೆರವು ಸಮಿತಿಯ ಗಮನಕ್ಕೆ ತಂದರೆ ಅವರಿಗೆ ನ್ಯಾಯಯುತವಾಗಿ ಸಿಗಬೇಕಾದ ಸೌಲಭ್ಯಗಳನ್ನು ಕೊಡಿಸುವಲ್ಲಿ ಉಚಿತವಾಗಿ ಕಾನೂನು ನೆರವಾಗಲಿದೆ ಎಂದರು.

# 'ಸ್ವಾವಲಂಬಿ ಬದುಕು ಕಟ್ಟಿಕೊಳ್ಳಿ' ಪ್ರಜಾವಾಣಿ.



ಚಿಕ್ಕನಾಯಕನಹಳ್ಳಿ: ಅಂಗವಿಕಲರಿಗೆ ಸರ್ಕಾರ ಹಲವು ಸೌಕರ್ಯ ನೀಡುತ್ತಿದ್ದು ಸದುಪಯೋಗಪಡಿಸಿ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಿ ಎಂದು ಸಿವಿಲ್ ನ್ಯಾಯಾಧೀಶೆ ಪ್ರಮೀಳಾ ಹೇಳಿದರು.

ತಾಲ್ಲೂಕಿನ ಹಾಲುಗೊಣ ಸಿದ್ದರಾಮೇಶ್ವರ ಶ್ರವಣದೋಷ ಮಕ್ಕಳ ವಸತಿ ಶಾಲೆ, ಯಶಸ್ವಿನಿ ಎಜುಕೇಷನ್ ಸೊಸೈಟಿ, ವಕೀಲರ ಸಂಘ, ಕಾನೂನು ಸೇವಾ ಸಮಿತಿಯಿಂದ ಆಯೋಜಿಸಿದ್ದ ವಿಕಲಚೇತನರ ದಿನ ಹಾಗೂ ಮಾನವ ಹಕ್ಕುಗಳ ದಿನ ಕಾರ್ಯಕ್ರಮದಲ್ಲಿ ಮಾತನಾಡಿದರು.

ವಕೀಲ ಜಯಣ್ಣ, ತುರುವೇಕೆರೆ, ಚಿಕ್ಕನಾಯಕನಹಳ್ಳಿ, ತಿಪಟೂರು ತಾಲ್ಲೂಕಿನ ವಿಆರ್‌ಡಬ್ಲ್ಯು, ಎಂಆರ್‌ಡಬ್ಲ್ಯುಗಳಿಗೆ ಅಂಗವಿಕಲರ ಹಕ್ಕುಗಳ ಬಗ್ಗೆ ಮಾಹಿತಿ ನೀಡಿದರು.

ಬೆಂಗಳೂರಿನ ವಾಣಿ ಚಿಲ್ಡ್ರನ್ ಫೌಂಡೇಶನ್‌ನ ವೀರೇಶ್ ಶ್ರವಣ ನ್ಯೂನ್ಯತೆಯ ಬಗ್ಗೆ ಮಾಹಿತಿ ನೀಡಿದರು. ಸೇವಾ ಅಂಧರ ಸಂಸ್ಥೆ ಸಂಸ್ಥಾಪಕ ಹೆಚ್.ಆರ್.ಶಿವಕುಮಾರ್, ಸಂಸ್ಥೆಯ ಅಧ್ಯಕ್ಷ ಚಂದ್ರಶೇಖರಯ್ಯ ಮಾತನಾಡಿದರು. ಸಂಸ್ಥೆಯ ಸಿದ್ದೇಶ್ ಇದ್ದರು.

ಪ್ರಜಾವಾಣಿ 26-12-19

# ಅಂಗವಿಕಲರ ಶಾಲೆಯಲ್ಲಿ ಹಬ್ಬ

ಚಿಕ್ಕನಾಯಕನಹಳ್ಳಿ: ಮಕ್ಕಳ ಹೃದಯದಲ್ಲಿ ಏಸುವನ್ನು ಕಾಣುತ್ತೇವೆ ಹಾಗಾಗಿಯೇ ಏಸುವಿನ ಜನ್ಮದಿನವನ್ನು ಮಕ್ಕಳೊಂದಿಗೆ ಆಚರಿಸುತ್ತಿದ್ದೇವೆ ಎಂದು ಏಸುವಿನ ಅನುಯಾಯಿ ರಾಮಕೃಷ್ಣಾಚಾರ್ ಹೇಳಿದರು.

ತಾಲ್ಲೂಕಿನ ಹಾಲುಗೊಣದ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣ ದೋಷ ಮಕ್ಕಳ ವಸತಿ ಶಾಲೆಯಲ್ಲಿ ಪಟ್ಟಣದ ಏಸುವಿನ ಅನುಯಾಯಿಗಳು ತೆರಳಿ ಶಾಲೆಯ ಮಕ್ಕಳೊಂದಿಗೆ ಕ್ರಿಸ್‌ಮಸ್ ಹಬ್ಬವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಿದರು.

ಏಸು ಈ ಶಾಲೆಯಲ್ಲಿರುವ ಮಕ್ಕಳ ನ್ಯೂನತೆ ಸರಿಪಡಿಸಲಿ ಎಂದು ಪ್ರಾರ್ಥಿಸಿ ಕ್ರಿಸ್ತನ ಜನ್ಮವನ್ನು ನಾವು ಆಚರಿಸುತ್ತಿದ್ದೇವೆ ಎಂದರು.

ಶುಷ್ರೂಕಿ ಓಂಕಾರಮ್ಮ ಮಾತನಾಡಿ, ಮನುಷ್ಯರ ಪಾಪಗಳನ್ನು ತೊರೆಯಲು ಏಸುವಿನ ಜನನವಾಯಿತು. ಸಮಾಧಾನವಿಲ್ಲದವರಿಗೆ ಸಮಧಾನ ಪಡಿಸುವುದು, ನೀತಿವಂತರನ್ನಾಗಿಸಲು ಏಸು ಶ್ರಮಪಟ್ಟರು ಎಂದರು.

ಈ ಸಂದರ್ಭದಲ್ಲಿ ಹಾಲುಗೊಣದ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣ ದೋಷ ಮಕ್ಕಳ ವಸತಿ ಶಾಲೆ ಅಧ್ಯಕ್ಷ ಚಂದ್ರಶೇಖರಯ್ಯ, ಕಾರ್ಯದರ್ಶಿ ಸಿದ್ದೇಶ್, ಏಸುವಿನ ಅನುಯಾಯಿಗಳಾದ ಬಾಲರಾಜು, ವಿಜಯಲಕ್ಷ್ಮಿ, ಶಿಡ್ಲಮ್ಮ, ಸರೋಜಮ್ಮ, ರಕ್ಷಾ ಹಾಗೂ ಶಾಲಾ ವಿದ್ಯಾರ್ಥಿಗಳು, ಸಿಬ್ಬಂದಿ ಹಾಜರಿದ್ದರು.




ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣ ದೋಷ ಮಕ್ಕಳ ವಸತಿ ಶಾಲೆಯಲ್ಲಿ ಕ್ರಿಸ್‌ಮಸ್ ಆಚರಿಸಲಾಯಿತು

ಪ್ರಜಾವಾಣಿ

ಇದ್ದರು.



ಮುಂಬೈನಲ್ಲಿ ನಡೆದ ರೌಂಡ್ ಟೇಬಲ್ 19 ಸಂಸ್ಥೆ ಆಯೋಜಿಸಿದ್ದ ಸೈಲೋ ಒಲಂಪಿಯಾಡ್ 2020ರಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಾಲುಗೊಣದ ಬಳಿ ಇರುವ ಸಿದ್ಧರಾಮೇಶ್ವರ ವಾಕ್ ಮತ್ತು ಶ್ರವಣ ದೋಷ ವಸತಿ ಶಾಲೆಯ ಮಕ್ಕಳು ರಾಷ್ಟ್ರಮಟ್ಟದ ಸಾಂಸ್ಕೃತಿಕ, ಕ್ರೀಡಾ ಸ್ಪರ್ಧೆಯಲ್ಲಿ ಪ್ರಶಸ್ತಿ ಪಡೆದರು.



ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಾಲುಗೊಣದ ಬಳಿ ಇರುವ ಶ್ರೀ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣ ದೋಷ ಮಕ್ಕಳ ವಸತಿ ಶಾಲೆಯ ಮಕ್ಕಳು ಮುಂಬೈನಲ್ಲಿ ನಡೆದ ರಾಷ್ಟ್ರಮಟ್ಟದ ಸಾಂಸ್ಕೃತಿಕ ಹಾಗೂ ಕ್ರೀಡಾ ಸ್ಪರ್ಧೆಯಲ್ಲಿ ಭಾಗವಹಿಸಿ ಜಯಶೀಲರಾಗಿ ಬಹುಮಾನ ಪಡೆದಿದ್ದಾರೆ.

ಪ್ರಜಾ ಪ್ರಗತಿ

ಬುಧವಾರ • ಫೆಬ್ರುವರಿ 13, 2019 ಪ್ರಜಾವಾಣಿ

ಸುದ್ದಿ 2 ನಿಮಿಷ

# ಸೈಲೆಂಟ್ ಒಲಂಪಿಯಾಡ್: ತಾಲ್ಲೂಕಿನ ಮಕ್ಕಳಿಗೆ 2ನೇ ಸ್ಥಾನ

ಚಿಕ್ಕನಾಯಕನಹಳ್ಳಿ: ತಾಲ್ಲೂಕಿನ ಹಾಲುಗೊಣದ ಯಶಸ್ವಿನಿ ಎಜುಕೇಷನ್ ಸೊಸೈಟಿ ಸಂಸ್ಥೆಯ ಕಿವುಡ ಮತ್ತು ಮೂಕ ಮಕ್ಕಳ ವಸತಿ ಶಾಲೆಯ ವಿದ್ಯಾರ್ಥಿಗಳು ಮುಂಬೈನಲ್ಲಿ ನಡೆದ ಸೈಲೆಂಟ್ ಒಲಂಪಿಯಾಡ್ 2019ರ ನೃತ್ಯ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನ ಪಡೆದಿದ್ದಾರೆ.

ಮುಂಬೈನ್ ರೌಂಡ್ ಟೇಬಲ್ 19 ಸಂಸ್ಥೆಯು ಆಯೋಜಿಸಿದ್ದ ರಾಷ್ಟ್ರಮಟ್ಟದ ನೃತ್ಯ ಸ್ಪರ್ಧೆ, ಕ್ರೀಡಾಕೂಟ ಸೇರಿದಂತೆ ಹಲವು ವಿಭಾಗಗಳಲ್ಲಿ ಭಾಗವಹಿಸಿ ಬಹುಮಾನ ಪಡೆಯುವ ಮೂಲಕ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಸ್ಪರ್ಧಿಗಳಿಗೆ ನೃತ್ಯ ಶಿಕ್ಷಕ ಪುನೀತ್ ಮಾರ್ಗದರ್ಶನ ನೀಡಿದ್ದರು.

# ಅಂಗವಿಕಲರ ವಿಶೇಷ ಗುಣ ಉತ್ತೇಜಿಸಿ

ಪ್ರಜಾವಾಣಿ ವಾರ್ತೆ

ಚಿಕ್ಕನಾಯಕನಹಳ್ಳಿ: ಅಂಗವಿಕಲ ಮಕ್ಕಳಿಗೆ ವಿಶೇಷ ಗುಣವಿರುತ್ತದೆ. ಅದನ್ನು ಗ್ರಹಿಸಿ, ಅವರಿಗೆ ಉತ್ತೇಜನ ನೀಡಿ ಎಂದು ನ್ಯಾಯಾಧೀಶರಾದ ಎಂ.ಪ್ರಮಿಳಾ ಹೇಳಿದರು.

ಪಟ್ಟಣದ ಕನ್ನಡ ಸಂಘದ ವೇದಿಕೆಯಲ್ಲಿ ವಿಶ್ವ ಶ್ರವಣ ನ್ಯೂನ್ಯತೆಯ ಮಕ್ಕಳ ದಿನಾಚರಣೆ ಅಂಗವಾಗಿ ಜಾಥಾ ಹಾಗೂ ಅಂಗವಿಕಲರಿಗಾಗಿ ಕಾನೂನು ಅರಿವು ಹಾಗೂ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪೋಷಕರು ಅಂಗವಿಕಲ ಮಕ್ಕಳನ್ನು ಮೂಲೆ ಗುಂಪು ಮಾಡಬಾರದು. ಅವರಲ್ಲಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸಿದರೆ ಜೀವನದಲ್ಲಿ ಮುಂದೆ ಬರುತ್ತಾರೆ. ಅನುಕಂಪ ತೋರಿಸುವ ಬದಲು ಆಶ್ರಯ ನೀಡಿ ಎಂದರು.

ಸಿದ್ಧರಾಮೇಶ್ವರ ವಾಕ್ ಮತ್ತು ಶ್ರವಣದೋಷ ಶಾಲಾ ನಿರ್ದೇಶಕ ಸಿದ್ದೇಶ್ ಪ್ರಾಸ್ತಾವಿಕವಾಗಿ ಮಾತನಾಡಿದರು. ವಕೀಲ ಸಂದೀಪ್, ವಕೀಲ ಮಂಜುನಾಥ್ ಮಾತನಾಡಿದರು. ವಾಕ್ ಮತ್ತು ಶ್ರವಣದೋಷ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮದಲ್ಲಿ ವೈದ್ಯರಾದ ಡಾ.ದಿವ್ಯ, ಕೃಷ್ಣಮೂರ್ತಿ ಉಪಸ್ಥಿತರಿದ್ದರು.



ಚಿಕ್ಕನಾಯಕನಹಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ನ್ಯಾಯಾಧೀಶರಾದ ಎಂ.ಪ್ರಮೀಳಾ ಮಾತನಾಡಿದರು

ಸುಧಾ ಓದಿರಿ


ಕೃತಿನ್ ಕಾಲೇಜ್ ಆಫ್ ಪ್ಯಾರಾಮೆಡಿಕಲ್ ಅಂಡ್ ಸೈನ್ಸ್
2ನೇ ಕ್ರಾಸ್, ವಾಲ್ಮೀಕಿನಗರ, ಎಸ್.ಐ.ಟಿ. ಕಾಲೇಜು ಎದುರು, ತುಮಕೂರು.
ಎಸ್.ಎಸ್.ಎಲ್.ಸಿ. ನಂತರ – 3 ವರ್ಷಗಳು/ಪಿ.ಯು.ಸಿ. (ವಿಜ್ಞಾನ) ನಂತರ – 2 ವರ್ಷಗಳು
ಲಭ್ಯವಿರುವ ಕೋರ್ಸ್‌ಗಳು
- ಡಿಪ್ಲೋಮ ಇನ್ ಆಪರೇಷನ್ ಥಿಯೇಟರ್ ಟೆಕ್ನಾಲಜಿ
- ಡಿಪ್ಲೋಮ ಇನ್ ಅಪ್ತಾಲ್‌ಮಾಲಜಿ ಟೆಕ್ನಾಲಜಿ
- ಡಿಪ್ಲೋಮ ಇನ್ ಲ್ಯಾಬೋರೇಟರಿ ಟೆಕ್ನಾಲಜಿ
- ಡಿಪ್ಲೋಮ ಇನ್ ಡಯಾಲಿಸಿಸ್ ಟೆಕ್ನಾಲಜಿ
- ಡಿಪ್ಲೋಮ ಇನ್ ಫಾರ್ಮಸಿ

ಕೆಲವೇ ಸೀಟುಗಳು ಲಭ್ಯವಿದೆ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಪ್ರಸನ್ನ ಕುಮಾರ್ 9886899439 ರೀನಾ 9611069608 ನಯಾಜ್ (ಫಾರ್ಮಸಿ) 9108256153


30/09/2019

# ವಿಶ್ವ ಶ್ರವಣ ನ್ಯೂನತೆ ಮಕ್ಕಳ ದಿನಾಚರಣೆ

ಚಿಕ್ಕನಾಯಕನಹಳ್ಳಿ: ಶ್ರೀ ಸಿದ್ಧರಾಮೇಶ್ವರ ವಾಕ್ ಮತ್ತು ಶ್ರವಣ ದೋಷ ಮಕ್ಕಳ ವಸತಿ ಶಾಲೆ, ತಾಲೂಕು ಕಾನೂನು ಸೇವಾ ಸಮಿತಿ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ತಾಲೂಕು ವಕೀಲರ ಸಂಘ ದಿಂದ ವಿಶ್ವ ಶ್ರವಣ ನ್ಯೂನತೆಯ ಮಕ್ಕಳ ದಿನಾಚರಣೆಯನ್ನು ಕನ್ನಡ ಸಂಘ ವೇದಿಕೆ ಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜಾಥಾ ಮತ್ತು ವಿಶೇಷ ಚೇತನರಿಗಾಗಿ ಕಾನೂನು ಅರಿವು ಹಾಗೂ ಜಾಗೃತಿ ಕಾರ್ಯಕ್ರಮವನ್ನು ನೆಡೆಸಲಾಯಿತು. ಪ್ರಧಾನ ಸಿವಿಲ್ ನ್ಯಾ.ಪ್ರಮೀಳಾ ಎಂ. ಕಾರ್ಯಕ್ರಮ ಉದ್ಘಾಟಿಸಿದರು. ವಸತಿ ಶಾಲೆಯ ಸಿದ್ದೇಶ್ ಉಪಸ್ಥಿತರಿದ್ದರು.



3/02/2019 ಪ್ರಜಾ ಪ್ರಗತಿ

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಾಲುಗೊಣದಲ್ಲಿರುವ ಶ್ರೀ ಸಿದ್ದರಾಮೇಶ್ವರ ಕಿವುಡ ಮತ್ತು ಮೂಕ ಮಕ್ಕಳ ವಸತಿ ಶಾಲೆಯ ದ್ಯಾರ್ಥಿಗಳು ಮುಂಬೈನಲ್ಲಿ ರೌಂಡ್ ಟೇಬಲ್ 19 ಸಂಸ್ಥೆ ಫೆ.4ರಂದು ಏರ್ಪಡಿಸಿರುವ ಸೈಲೆಂಟ್ ಒಲಂಪೀಡಿಯಾದಲ್ಲಿ ಭಾಗವಸಲಿದ್ದಾರೆ. ಇದೇ ದ್ಯಾರ್ಥಿಗಳು ಮುಂಬೈನಲ್ಲಿ ನಡೆಯಲಿರುವ ರಾಷ್ಟ್ರಮಟ್ಟದ ಸಾಂಸ್ಕೃತಿಕ ಮತ್ತು ಕ್ರೀಡಾಕೂಟ ಸ್ಪರ್ಧೆಯಲ್ಲಿ ಭಾಗವಸಲಿದ್ದಾರೆ.

ಪ್ರಜಾ ಪ್ರಗತಿ 3/02/2019




ಇತ್ತೀಚೆಗೆ ಮುಂಬೈನಲ್ಲಿ ರೌಂಡ್ ಟೇಬಲ್ ಸಂಸ್ಥೆ ಆಯೋಜಿಸಿದ್ದ ರಾಷ್ಟ್ರಮಟ್ಟದ ಸೈಲಂಟ್ ಒಲಂಪಿಡಿಯಾದ ಸಾಂಸ್ಕೃತಿಕ, ಕ್ರೀಡಾ ಸ್ಪರ್ಧೆಯಲ್ಲಿ ಚಿಕ್ಕನಾಯಕನಹಳ್ಳಿ ತಾಲೂಕಿನ ಹಾಲುಗೋಣದ ಶ್ರೀ ಸಿದ್ಧರಾಮೇಶ್ವರ ಕಿವುಡ ಮತ್ತು ಮೂಕ ವಸತಿಶಾಲೆ ಮಕ್ಕಳು ತೃತೀಯ ಸ್ಥಾನ ಪಡೆದಿದ್ದಾರೆ. ಯಶಸ್ವಿನಿ ಯಜುಕೇಷನ್ ಸೊಸೈಟಿ ಕಾರ್ಯದರ್ಶಿ ಸಿದ್ದೇಶ್ ಅಭಿನಂದಿಸಿದ್ದಾರೆ.

ವಿಜಯವಾಣಿ ದಿನಾಂಕ 12/02/2019

ವಿಶ್ವ ಕಿವುಡ ಮಕ್ಕಳ ದಿನಾಚರಣೆ ಕಾರ್ಯಕ್ರಮ

# ಕಿವುಡ ಮಕ್ಕಳ ಸರ್ಕಾರಿ ಶಾಲೆ ತೆರೆಯಲಿ

ತಿಪಟೂರು: ಎಲ್ಲ ರೀತಿಯ ಅಂಗವಿಕಲರನ್ನು ಸರಿಸಮಾನವಾಗಿ ಕಾಣುವ ಮನೋಭಾವ ಬೆಳೆಸಿಕೊಂಡು ಅವರಿಗೆ ಧೈರ್ಯ, ಆತ್ಮವಿಶ್ವಾಸ ತುಂಬಬೇಕು ಎಂದು ಎಪಿಎಂಸಿ ಅಧ್ಯಕ್ಷ ರವೀಶ್ ತಿಳಿಸಿದರು.

ನಗರದ ಬಯಲು ರಂಗಮಂದಿರಲ್ಲಿ ಯಶಸ್ವಿನಿ ಎಜುಕೇಶನ್ ಸೊಸೈಟಿಯ ಹಾಲುಗೊಣ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣ ದೋಷ ಮಕ್ಕಳ ವಸತಿ ಶಾಲೆ ಮತ್ತು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ರಾಷ್ಟ್ರೀಯ ಸೇವಾ ಯೋಜನಾ ಘಟಕದಿಂದ ನಡೆದ ವಿಶ್ವ ಕಿವುಡ ಮಕ್ಕಳ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಶ್ರವಣದೋಷ ಮಕ್ಕಳಿಗೆ ಪ್ರೋತ್ಸಾಹ ನೀಡಿದರೆ ಹೆಚ್ಚು ಕ್ರಿಯಾಶೀಲರಾಗುತ್ತಾರೆ. ಬಹಳಷ್ಟು ಖಾಸಗಿ ಸಂಸ್ಥೆಗಳು ಇಂತಹ ಮಕ್ಕಳನ್ನು ಗುರುತಿಸಿ ಅವರಿಗೆ ಶಿಕ್ಷಣದ ಜತೆಗೆ ಬದುಕು ಕಲ್ಪಿಸಿಕೊಡುತ್ತಿವೆ. ಕಿವುಡ ಮಕ್ಕಳಿಗಾಗಿ ರಾಜ್ಯದಲ್ಲಿ ಕೇವಲ ನಾಲ್ಕು ಸರ್ಕಾರಿ ಶಾಲೆಗಳಿವೆ. ಸರ್ಕಾರ ಇಂತಹ ಮಕ್ಕಳಿಗೆ ವಿಶೇಷ ವ್ಯವಸ್ಥೆ ಕಲ್ಪಿಸಿಕೊಡುವ ಜತೆಗೆ ತಾಲ್ಲೂಕಿಗೆ ಒಂದರಂತೆ ಶಾಲೆ ತೆರೆಯಬೇಕು ಎಂದರು.

ತಹಶೀಲ್ದಾರ್ ಮಂಜುನಾಥ್, ಕುಮಾರ್ ಆಸ್ಪತ್ರೆಯ ಡಾ. ಶ್ರೀಧರ್, ತಾಲ್ಲೂಕು ಪಂಚಾಯಿತಿ ಸದಸ್ಯ ಪುಟ್ಟಸ್ವಾಮಿ ಮಾತನಾಡಿದರು.

ರಾಣೆಬೆನ್ನೂರಿನ ರೇಣುಕ ಯಲ್ಲಮ್ಮ ಕಿವುಡ, ಮೂಕ ಶಾಲೆಯ ಎಚ್.ಆರ್. ಶಿವಕುಮಾರ್, ಶ್ರವಣ ಪ್ರಮಾಣವನ್ನು ಪರೀಕ್ಷೆ ಮಾಡುವ ಯಂತ್ರವನ್ನು ಪ್ರತಿ ಜಿಲ್ಲೆ ಮತ್ತು ತಾಲ್ಲೂಕು ಸರ್ಕಾರಿ ಆಸ್ಪತ್ರೆಗಳಲ್ಲಿ ಅಳವಡಿಸಬೇಕು ಎಂದು ಆಗ್ರಹಿಸಿದರು.



ಕಾರ್ಯಕ್ರಮವನ್ನು ಎಪಿಎಂಸಿ ಅಧ್ಯಕ್ಷ ರವೀಶ್ ಉದ್ಘಾಟಿಸಿದರು.

ಕಾರ್ಯಕ್ರಮಕ್ಕೆ ಮುನ್ನಾ ಕೆಂಪಮ್ಮದೇವಿ ದೇವಸ್ಥಾನದಿಂದ ಮೆರವಣಿಗೆ ನಡೆಯಿತು. ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ. ಎಚ್. ಬಿ. ಕುಮಾರಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಮಕ್ಕಳ ಸಮಿತಿ ಅಧ್ಯಕ್ಷ ನಂದಕುಮಾರ್, ಯಶಸ್ವಿನಿ ಎಜುಕೇಶನ್ ಸೊಸೈಟಿ ಕಾರ್ಯದರ್ಶಿ ಸಿದ್ದೇಶ್, ಪ್ರೊ. ಅನುಪ್ರಸಾದ್, ಪ್ರೊ. ಮಮತಾ, ಪ್ರೊ. ಕವಿತಾ, ಡಾ.ಎಲ್. ಎಂ. ವೆಂಕಟೇಶ್, ರವಿಶಂಕರ್, ಹರೀಶ್ ಇದ್ದರು. ಕಿವುಡ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

Bengaluru

## ವಿಶಿಷ್ಟಚೇತನರು ಸ್ವಾವಲಂಬಿ ಬದುಕು ನಡೆಸಲು ಅವಕಾಶ ಕಲ್ಪಿಸಿ: ಡಾ.ಮಂಜುನಾಥ್

# ಸೌಲಭ್ಯಗಳಿಂದ ವಂಚಿತರಾದ ವಿಶಿಷ್ಟಚೇತನರು

• ದಿಗಂತ ವರದಿ, ತಿಪಟೂರು



ವಿಶಿಷ್ಟಚೇತನರಿಗೆ ಮೂಲಭೂತ ಸೌಕರ್ಯಗಳು ದೊರೆಯದೆ, ಸಮಾಜದಲ್ಲಿ ಉತ್ತಮ ಸ್ಥಾನಮಾನ ದೊರೆಯದ ಕಾರಣದಿಂದ ಹಿಂದುಳಿದಿದ್ದಾರೆ ಹೊರೆತು ಸೌಕರ್ಯಗಳು ದೊರೆತರೆ ಸ್ವಾವಲಂಬಿ ಬದುಕನ್ನು ಸಾಗಿಸುತ್ತಾರೆ. ಅದ್ದರಿಂದ ಶಾಶ್ವತ ಪರಿಹಾರ ನೀಡುವಂತ ಸೌಕರ್ಯಗಳನ್ನು ನೀಡುವ ಕಾರ್ಯವಾಗಬೇಕಿದೆ ಎಂದು ತಹಶೀಲ್ದಾರ್ ಡಾ.ವಿ.ಮಂಜುನಾಥ್ ತಿಳಿಸಿದರು.

ನಗರದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಬಯಲು ರಂಗಮಂದಿರದಲ್ಲಿ ಚಿ.ನಾ.ಹಳ್ಳಿಯ ಹಾಲುಗೊಣದ ಶ್ರೀ ಸಿದ್ಧರಾಮೇಶ್ವರ ವಾಕ್ ಮತ್ತು ಶ್ರವಣ ದೋಷ ಮಕ್ಕಳ ಶಾಲೆ ಹಾಗೂ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಎನ್.ಎಸ್.ಎಸ್. ಘಟಕಗಳ ಸಹಯೋಗದಲ್ಲಿ ವಿಶ್ವ ಕಿವುಡ ಮಕ್ಕಳ ದಿನಾಚರಣೆಯಲ್ಲಿ ಭಾಗವಹಿಸಿ ಮಾತನಾಡಿ, ಸಮಾಜದಲ್ಲಿದಿವ್ಯಾಂಗಚೇತನರು, ವಿಶಿಷ್ಟಚೇತನರಿಗೆ ಆತ್ಮವಿಶ್ವಾಸ ಮನೋಭಾವವು ವೃದ್ಧಿಯಾಗುವ ರೀತಿಯಲ್ಲಿ ತೊಡಗಿಸಿಕೊಂಡು ಹೆಚ್ಚಿನ ತರಬೇತಿಯನ್ನು ನೀಡಿದರೆ ಎಲ್ಲರಂತೆ ಸಮಾಜದಲ್ಲಿ ಸ್ವಾವಲಂಬಿ ಜೀವನವನ್ನು ನಡೆಸಲು ಅನುಕೂಲವಾಗುತ್ತದೆ. ಅದ್ದರಿಂದ ನಾವೆಲ್ಲರೂ ನೋಡುವ ರೀತಿಯನ್ನು ಮೊದಲು ಬದಲಿಸಿಕೊಂಡು ಅನುಕಂಪ, ಕರುಣೆಯನ್ನು ತೋರದೆ ಸೌಕರ್ಯಗಳನ್ನು ನೀಡುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ವಿಶಿಷ್ಟ ಚೇತನರಿಗೆ ಗಣಕಯಂತ್ರದ ತರಬೇತಿಯನ್ನು ಸಂಪೂರ್ಣವಾಗಿ ನೀಡಿದರೆ ಐಟಿ, ಬಿಟಿಯವರಿಗೆ ಸವಾಲಾಗಿ ನಿಲ್ಲುವಂತಹ ಜ್ಞಾನ, ಬುದ್ಧಿವಂತಿಕೆ ಉಳ್ಳವರಾಗಿದ್ದಾರೆ. ಅದ್ದರಿಂದ ಎಲ್ಲರನ್ನೂ ಸಮಾನವಾಗಿ ಗೌರವಿಸಿ ದೇಶದ ಅಭಿವೃದ್ಧಿಗೆ ಸಹಕರಿಸಿ ಎಂದು ಕರೆ ನೀಡಿದರು.

ಕುಮಾರ ಆಸ್ಪತ್ರೆಯ ಡಾ.ಶ್ರೀಧರ್ ಮಾತನಾಡಿ, ವೈದ್ಯಕೀಯ ಕ್ಷೇತ್ರದಲ್ಲಿ ಅನೇಕ ಆವಿಷ್ಕಾರಗಳಾಗಿದ್ದು, ಹುಟ್ಟಿದ ಮಕ್ಕಳಲ್ಲಿ ಇರುವಂತಹ ನ್ಯೂನ್ಯತೆಗಳನ್ನು ಪರೀಕ್ಷೆ ಮಾಡಿ ಚಿಕಿತ್ಸೆ ನೀಡಿದರೆ ಚಿಕ್ಕಂದಿನಲ್ಲಿಯೇ ಆ ಸಮಸ್ಯೆಯನ್ನು ದೂರವಾಗಿಸಬಹುದು ಎಂದರು.

ಮಕ್ಕಳ ಕಲ್ಯಾಣ ಸಮಿತಿಯ ಜಿಲ್ಲಾಧ್ಯಕ್ಷ ಬಿ.ಎಸ್.ನಂದಕುಮಾರ್ ಮಾತನಾಡಿ, ವಿಶಿಷ್ಟಚೇತನರಿಗೆ ಅನುಕಂಪ ಬೇಕಾಗಿಲ್ಲ, ಅವರಿಗೆ ನಿರ್ಮಲ ಪ್ರೀತಿಯ ಅವಶ್ಯಕವಿದ್ದು, ಸಹಕಾರವನ್ನು ನೀಡುವ ಮನೋಭಾವವನ್ನು ಬೆಳೆಸಿಕೊಂಡಾಗ ಜೀವಿಸಲು ಸಹಕಾರಿಯಾಗುತ್ತದೆ ಎಂದರು. ರಾಣೆಬೆನ್ನೂರಿನ ರೇಣುಕ ಯಲ್ಲಮ್ಮ ಕಿವುಡ, ಮೂಕ ಮಕ್ಕಳ ಶಾಲೆಯ ಶಿವಕುಮಾರ್, ಈ ಸಂದರ್ಭದಲ್ಲಿ ಎಪಿಎಂಸಿ ಅಧ್ಯಕ್ಷ ರವೀಶ್, ತಾಪಂ ಸದಸ್ಯ ಪುಟ್ಟಸ್ವಾಮಿ, ಪ್ರಾಂಶುಪಾಲ ಕುಮಾರಸ್ವಾಮಿ, ಸಿದ್ದೇಶ್, ಪ್ರೊ.ಹೊನ್ನಾಂಜಿನಯ್ಯ, ಪ್ರೊ.ಅನುಪ್ರಸಾದ್, ಡಾ.ಎಲ್.ಎಂ.ವೆಂಕಟೇಶ್ ಮತ್ತಿತರರಿದ್ದರು.

# ಅಂಗವಿಕಲ ಮಕ್ಕಳಿಗೆ ಧೈರ್ಯ ತುಂಬಿ

## ಇತರೆ ಮಕ್ಕಳಂತೆ ಸರಿಸಮಾನವಾಗಿ ಕಾಣುವ ಮನೋಭಾವ ಬೆಳೆಸಿಕೊಳ್ಳಿ: ರವೀಶ್

• **ಕನ್ನಡಪ್ರಭ ವಾರ್ತೆ** ತಿಪಟೂರು

ಅಂಗವಿಕಲ ಮಕ್ಕಳನ್ನು ಇತರೆ ಮಕ್ಕಳಂತೆ ಸರಿಸಮಾನವಾಗಿ ಕಾಣುವ ಮನೋಭಾವವನ್ನು ಪ್ರತಿಯೊಬ್ಬರು ಬೆಳೆಸಿಕೊಂಡು ಅವರಿಗೆ ಧೈರ್ಯ, ಆತ್ಮವಿಶ್ವಾಸವನ್ನು ತುಂಬಿ ಸಮಾಜದಲ್ಲಿ ಬದುಕುವ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಎಪಿಎಂಸಿ ಅಧ್ಯಕ್ಷ ರವೀಶ್ ತಿಳಿಸಿದರು.

ನಗರದ ಬಯಲು ರಂಗಮಂದಿರದಲ್ಲಿ ಯಶಸ್ವಿನಿ ಎಜುಕೇಶನ್ ಸೊಸೈಟಿಯ ಶ್ರೀ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣ ದೋಷ ಮಕ್ಕಳ ವಸತಿ ಶಾಲೆ ಹಾಲುಗೊಣ ಮತ್ತು ರಾಷ್ಟ್ರೀಯ ಸೇವಾ ಯೋಜನಾ ಘಟಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ಕಿವುಡ ಮಕ್ಕಳ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದರು.

ಶ್ರವಣದೋಷ ಮಕ್ಕಳ ಜ್ಞಾನ ಮಟ್ಟ ಚುರುಕಾಗಿಸುತ್ತದೆ. ಅವರು ಸಹ ಇತರ ಮಕ್ಕಳಂತೆ ಕ್ರಿಯಾಶೀಲತೆಯಿಂದಿರುತ್ತಾರೆ. ಎಷ್ಟೋ ಖಾಸಗಿ ಸಂಸ್ಥೆಗಳು, ಎನ್‌ಜಿಒಗಳು ಇಂತಹ ಮಕ್ಕಳನ್ನು ಗುರುತಿಸಿ ಅವರಿಗೆ ಶಿಕ್ಷಣದ ಜೊತೆಗೆ ಬದುಕು ಕಲ್ಪಿಸಿಕೊಡುತ್ತಿದ್ದಾರೆ. ರಾಜ್ಯದಲ್ಲಿ ಕೇವಲ ನಾಲ್ಕು ಮಾತ್ರ ಕಿವುಡ ಸರ್ಕಾರಿ ಶಾಲೆಗಳಿದ್ದು, ಸರ್ಕಾರ ಇಂತಹ ಮಕ್ಕಳಿಗೆ ವಿಶೇಷ ವ್ಯವಸ್ಥೆ ಕಲ್ಪಿಸಿಕೊಡುವ ಜೊತೆಗೆ ತಾಲೂಕಿಗೆ ಒಂದರಂತೆ ಕಿವುಡ ಶಾಲೆಯನ್ನು ತೆರೆಯಬೇಕೆಂದು ಮನವಿ ಮಾಡಿದರು.

**ಸ್ವಾವಲಂಬಿ ಬದುಕು ಕಟ್ಟಿಕೊಡಬೇಕು:** ತಹಸೀಲ್ದಾರ್ ಮಂಜುನಾಥ್ ಮಾತನಾಡಿ, ಅಂಗವಿಕಲ ಮಕ್ಕಳನ್ನು ಗುರ್ತಿಸಿ ಅವರಿಗೆ ಬೇಕಾದ ತರಬೇತಿ ನೀಡಿ ಸ್ವಾವಲಂಬಿ ಬದುಕನ್ನು ಕಟ್ಟಿಕೊಡಬೇಕಿದೆ. ಗರ್ಭಿಣಿಯರು ಪೌಷ್ಟಿಕಾಂಶಯುಕ್ತ ಆಹಾರ ಸೇವನೆಯ ಕೊರತೆಯಿಂದ ಇಂತಹ ಮಕ್ಕಳು ಹುಟ್ಟುವ ಸಾಧ್ಯತೆ ಇರುತ್ತದೆ. ಗರ್ಭಿಣಿಯರು ಜಂಕ್‌ಫುಡ್‌ಗಳ ಮೊರೆ ಹೋಗದೆ ಪೌಷ್ಟಿಕ ಆಹಾರ ಸೇವನೆ ಮಾಡಬೇಕು ಎಂದು ಸಲಹೆ ನೀಡಿದರು.

ಅಂಗವಿಕಲ ಮಕ್ಕಳಲ್ಲಿಯೂ ನಾವು ಬೇರೆಯವರಂತೆ ಇರಬೇಕೆಂಬ ಮನೋಲಾಸೆ ಇರುತ್ತದೆ. ಅವರಿಗೆ ಅನುಕಂಪ ತೋರದೆ ಪ್ರೀತಿ, ವಿಶ್ವಾಸದಿಂದ ಆತ್ಮಸ್ಥೈರ್ಯ ತುಂಬಿ ಬದುಕುವ ಧೈರ್ಯ ಮೂಡಿಸಬೇಕು. ಪ್ರೋತ್ಸಾಹ, ಸಹಕಾರ ನೀಡಿದರೆ ಅವರು ಒಂದಲ್ಲೊಂದು ದಿನ ಉನ್ನತ ಅಧಿಕಾರಿಗಳಾಗಬಹುದು. ಆದ್ದರಿಂದ ಕೀಳರಿಮೆ ಬಿಟ್ಟು ಅವರನ್ನು ಸಮಾಜಮುಖಿಯನ್ನಾಗಿ ಮಾಡುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದರು.



ವಿಶ್ವ ಕಿವುಡ ಮಕ್ಕಳ ದಿನಾಚರಣೆಯನ್ನು ಎಪಿಎಂಸಿ ಅಧ್ಯಕ್ಷ ರವೀಶ್ ಉದ್ಘಾಟಿಸಿದರು. ತಾಪಂ ಸದಸ್ಯ ಪುಟ್ಟಸ್ವಾಮಿ, ಪ್ರೊ. ಎಚ್.ಬಿ. ಕುಮಾರಸ್ವಾಮಿ ಮತ್ತಿತರರು ಇದ್ದರು.

ಕುಮಾರ್ ಆಸ್ಪತ್ರೆಯ ಡಾ.ಶ್ರೀಧರ್ ಮಾತನಾಡಿ, ವೈಜ್ಞಾನಿಕ ಜಗತ್ತಿನಲ್ಲಿ ನಾವಿದ್ದು, ಪ್ರತಿಯೊಂದು ಸಮಸ್ಯೆಗೂ ಪರಿಹಾರವಿದ್ದೇ ಇರುತ್ತೆ. ತಾಯಂದಿರು ಮಗು ಹುಟ್ಟಿದ ತಕ್ಷಣ ಪರೀಕ್ಷೆ ಮಾಡಿಸಿದಾಗ ಮಗುವಿನಲ್ಲಿರುವ ಸಮಸ್ಯೆ ತಿಳಿಯುತ್ತದೆ. ಎಲ್ಲರೂ ಸೇರಿ ಮುಂದಿನ ದಿನಗಳಲ್ಲಾದರೂ ಶ್ರವಣಮುಕ್ತ ಮಕ್ಕಳ ದೇಶವನ್ನಾಗಿಸಲು ಪಣತೊಡಬೇಕೆಂದರು.

ತಾಪಂ ಸದಸ್ಯ ಪುಟ್ಟಸ್ವಾಮಿ ಮಾತನಾಡಿ, ಭಗವಂತನ ಸೃಷ್ಟಿಯ ವ್ಯತ್ಯಾಸದಿಂದ ಇಂತಹ ಮಕ್ಕಳು ಹುಟ್ಟುತ್ತಾರೆ. ಆದರೆ ಅವರನ್ನು ಕಡೆಗಣಿಸದೆ ಸೂಕ್ತ ಚಿಕಿತ್ಸೆ ನೀಡಬೇಕು. ನನಗೆ ತೊಂದರೆ ಇದೆ ಎಂಬ ಮನೋಭಾವ ಅವರಲ್ಲಿ ಬಾರದಂತೆ ನೋಡಿಕೊಳ್ಳಬೇಕಿದೆ ಎಂದರು.

ಇತಿಹಾಸ ವಿಭಾಗದ ಮುಖ್ಯಸ್ಥ ಪ್ರೊ.ಎಚ್.ಬಿ. ಕುಮಾರಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಮಕ್ಕಳ ಸಮಿತಿ ಜಿಲ್ಲಾಧ್ಯಕ್ಷ ನಂದಕುಮಾರ್, ಯಶಸ್ವಿನಿ ಎಜುಕೇಶನ್ ಸೊಸೈಟಿಯ ಕಾರ್ಯದರ್ಶಿ ಸಿದ್ದೇಶ್, ಪ್ರೊ. ಅನುಪ್ರಸಾದ್, ಪ್ರೊ.ಮಮತಾ, ಪ್ರೊ.ಕವಿತಾ, ಡಾ.ಎಲ್.ಎಂ. ವೆಂಕಟೇಶ್, ರವಿಶಂಕರ್, ಹರೀಶ್ ಮತ್ತಿತರರಿದ್ದರು. ಕಿವುಡ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮವು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

# ವಿಕಲಚೇತನ ಮಕ್ಕಳಿಗೆ ಆತ್ಮವಿಶ್ವಾಸ ತುಂಬಿ

**ಸಂ.ಕ ಸಮಾಚಾರ ತಿಪಟೂರು.**

ವಿಕಲಚೇತನ ಮಕ್ಕಳನ್ನು ಇತರೆ ಮಕ್ಕಳಂತೆ ಸರಿಸಮಾನವಾಗಿ ಕಾಣುವ ಮನೋಭಾವವನ್ನು ಪ್ರತಿಯೊಬ್ಬರು ಬೆಳೆಸಿಕೊಂಡರೆ ಅವರಿಗೆ ಧೈರ್ಯ, ಆತ್ಮವಿಶ್ವಾಸವನ್ನು ತುಂಬಿ, ಬದುಕುವ ಅವಕಾಶ ಸಿಗಲಿದೆ ಎಂದು ಎಪಿಎಂಸಿ ಅಧ್ಯಕ್ಷ ರವೀಶ್ ತಿಳಿಸಿದರು.

ನಗರದ ಬಯಲು ರಂಗಮಂದಿರದಲ್ಲಿ ಯಶಸ್ವಿನಿ ಎಜುಕೇಶನ್ ಸೊಸೈಟಿ, ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣ ದೋಷ ಮಕ್ಕಳ ವಸತಿ ಶಾಲೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ಕಿವುಡ ಮಕ್ಕಳ ದಿನಾಚರಣೆಯನ್ನು ಉದ್ಘಾಟಿಸಿ, ಖಾಸಗಿ ಸಂಸ್ಥೆಗಳು ಅಂತಹ ಮಕ್ಕಳಿಗೆ ಶಿಕ್ಷಣದ ಜೊತೆಗೆ ಬದುಕು ಕಲ್ಪಿಸಿಕೊಡುತ್ತಿದ್ದಾರೆ. ರಾಜ್ಯದಲ್ಲಿ ಕೇವಲ ನಾಲ್ಕು ಕಿವುಡ ಸರ್ಕಾರಿ ಶಾಲೆಗಳಿವೆ ಆದ್ದರಿಂದ ಸರ್ಕಾರ ಪ್ರತಿ ತಾಲೂಕಿಗೆ ಒಂದರಂತೆ ಕಿವುಡ ಶಾಲೆಯನ್ನು ತೆರೆಯಬೇಕೆಂದು ಮನವಿ ಮಾಡಿದರು.

ತಹಶೀಲ್ದಾರ್ ಮಂಜುನಾಥ್ ಮಾತನಾಡಿ, ವಿಶೇಷ ಚೇತನ ಮಕ್ಕಳಿಗೆ ತರಬೇತಿ ನೀಡಿ ಸ್ವಾವಲಂಬಿ ಬದುಕನ್ನು ಕಟ್ಟಿಕೊಡಬೇಕಿದೆ. ಗರ್ಭಿಣಿಯರಲ್ಲಿ ಪೌಷ್ಟಿಕಾಂಶಯುಕ್ತ ಆಹಾರದ ಕೊರೆಯಿಂದ ಇಂತಹ ಮಕ್ಕಳು ಹುಟ್ಟುವ ಸಾಧ್ಯತೆ ಇದೆ. ಗರ್ಭಿಣಿಯರು ಜಂಕ್‌ಫುಡ್‌ಗಳ ಮೊರೆಹೋಗದೆ ಪೌಷ್ಟಿಕ ಆಹಾರ ಸೇವನೆ ಮಾಡಬೇಕು. ವಿಕಲಚೇತನ ಮಕ್ಕಳಲ್ಲಿಯೂ ನಾವು ಬೇರೆಯವರಂತೆ ಇರಬೇಕೆಂಬ ಮನೋಭಿಲಾಸೆ ಇರುತ್ತದೆ. ಅವರಿಗೆ ಅನುಕಂಪ ತೋರದೆ ಪ್ರೀತಿ, ವಿಶ್ವಾಸದಿಂದ ಆತ್ಮಸ್ಥೈರ್ಯ ತುಂಬಿ ಬದುಕುವ ಧೈರ್ಯ ಮೂಡಿಸಬೇಕೆಂದು ಸಲಹೆ ನೀಡಿದರು.

ಅಧ್ಯಕ್ಷತೆಯನ್ನು ಇತಿಹಾಸ ವಿಭಾಗದ ಮುಖ್ಯಸ್ಥ ಹೆಚ್.ಬಿ. ಕುಮಾರಸ್ವಾಮಿ ವಹಿಸಿದ್ದರು. ಮಕ್ಕಳ ಸಮಿತಿ ಜಿಲ್ಲಾಧ್ಯಕ್ಷ ನಂದಕುಮಾರ್, ಯಶಸ್ವಿನಿ ಎಜುಕೇಶನ್ ಸೊಸೈಟಿಯ ಕಾರ್ಯದರ್ಶಿ ಸಿದ್ದೇಶ್, ಉಪನ್ಯಾಸಕರಾದ ಅನುಪ್ರಸಾದ್, ಮಮತಾ, ಕವಿತಾ, ಡಾ.ಎಲ್.ಎಂ.ವೆಂಕಟೇಶ್, ರವಿಶಂಕರ್, ಹರೀಶ್ ಮತ್ತಿತರರಿದ್ದರು.



ತಿಪಟೂರಿನಲ್ಲಿ ನಡೆದ ವಿಶ್ವ ಕಿವುಡ ಮಕ್ಕಳ ದಿನಾಚರಣೆಯನ್ನು ಎಪಿಎಂಸಿ ಅಧ್ಯಕ್ಷ ರವೀಶ್ ಉದ್ಘಾಟಿಸಿದರು. ತಾ.ಪಂ.ಸದಸ್ಯ ಪುಟ್ಟಸ್ವಾಮಿ, ಹೆಚ್.ಬಿ. ಕುಮಾರಸ್ವಾಮಿ ಮತ್ತಿತರರು ಇದ್ದರು.

# ಮಕ್ಕಳ ಪ್ರತಿಭೆ ಹೊರಹೊಮ್ಮಲು ಶಿಕ್ಷಕರ ಪಾತ್ರ ಅವಶ್ಯ



ಚಿ.ನಾ.ಹಳ್ಳಿ ತಾಲೂಕಿನ ಹಾಲುಗೊಣದಲ್ಲಿರುವ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣದೋಷಿತ ಮಕ್ಕಳ ವಸತಿಶಾಲೆಯಲ್ಲಿ ವಿಕಲಚೇತನರು ಗಣರಾಜ್ಯೋತ್ಸವ ಆಚರಿಸಿದರು.

**ಸಂ.ಕ ಸಮಾಚಾರ ಚಿ.ನಾ.ಹಳ್ಳಿ**

ವಿಕಲಚೇತನ ಮಕ್ಕಳಲ್ಲಿ ವಿಶೇಷ ಸಾಮರ್ಥ್ಯವಿರುತ್ತದೆ. ಹುಡುಕಿ ಹೊರತೆಗೆಯುವುದು ಶಿಕ್ಷಕರ ಹಾಗೂ ಪೋಷಕರ ಕರ್ತವ್ಯ ಎಂದು ಸ್ಪಂದನ ಜನಪರ ಸೇವಾ ವೇದಿಕೆ ಅಧ್ಯಕ್ಷ ಸಿ.ಬಿ.ಲೋಕೇಶ್ ಹೇಳಿದರು.

ತಾಲೂಕಿನ ಹಾಲುಗೊಣದಲ್ಲಿರುವ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣದೋಷಿತ ಮಕ್ಕಳ ವಸತಿಶಾಲೆಯಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಶಿಕ್ಷಕರು ಶಾಲೆಗೆ ಬರುವ ಎಲ್ಲ ಮಕ್ಕಳನ್ನು ಒಂದೇ ಎಂಬ ದೃಷ್ಟಿಯಲ್ಲಿ ನೋಡಿಕೊಳ್ಳಬೇಕು. ಅದೇರೀತಿ ಪೋಷಕರು ತಮ್ಮ ಮಕ್ಕಳು ಶಾಲೆಗೆ ಹೋಗುತ್ತಾರೆ ಎಂಬುದಷ್ಟೇ ತಿಳಿಯದೇ ಅವರ ಚಲನವಲನಗಳನ್ನು ಗಮನ ಹರಿಸುತ್ತಿರಬೇಕು ಎಂದರು.

ಭುವನೇಶ್ವರಿ ಯುವಕ ಸಂಘದ ಅಧ್ಯಕ್ಷ ಶಾಂತ್‌ಕುಮಾರ್ ಮಾತನಾಡಿ, ಸ್ವಾತಂತ್ರ್ಯ ತಂದುಕೊಟ್ಟ ಮಹವೀಯರನ್ನು ನಾವು ಮರೆಯಬಾರದು, ಅವರಂತೆ ನಾವು ಮಕ್ಕಳನ್ನು ದೇಶಪ್ರೇಮಿಯನ್ನಾಗಿ ಬೆಳೆಸಬೇಕು ಎಂದ ಅವರು ಇಂದು ಚಿಕ್ಕದಾಗಿರುವ ಈ ಶಾಲೆ ಮುಂದೆ ದೊಡ್ಡದಾಗಿ ಬೆಳೆಯಲಿ ಎಂದು ಆಶಿಸಿದರು.

ಶ್ರವಣದೋಷ ಮಕ್ಕಳು ಕೋಲಾಟ ಪ್ರದರ್ಶನ ನೀಡಿದರು. ಸಂಸ್ಥೆಯ ನಿರ್ದೇಶಕ ಸಿದ್ದಯ್ಯ ಮಾಳಿಗೆಹಳ್ಳಿ ಅವರನ್ನು ಸನ್ಮಾನಿಸಲಾಯಿತು. ಸ್ನೇಹ ಫೌಂಡೇಷನ್ ಅಧ್ಯಕ್ಷರಾದ ದೇವರತ್ನ, ಆಟೋ ಚಾಲಕರ ಸಂಘದ ಅಧ್ಯಕ್ಷ ಮಂಜುನಾಥ್, ಜಗದೀಶ್, ಸಂಸ್ಥೆಯ ಅಧ್ಯಕ್ಷ ಚಂದ್ರಶೇಖರಯ್ಯ, ಕಾರ್ಯದರ್ಶಿ ಬಿ.ಕೆ.ಸಿದ್ದೇಶ್, ಶಿಕ್ಷಕರಾದ ಅಮರೇಶ್, ಲಾವಣ್ಯ ಮತ್ತಿತರರು ಉಪಸ್ಥಿತರಿದ್ದರು.

17/01/2018 ಸಂಯುಕ್ತ ಕರ್ನಾಟಕ




ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಾಲುಗೋಣದ ಸಿದ್ದರಾಮೇಶ್ವರ ಮೂಕ ಮತ್ತು ಕಿವುಡ ಮಕ್ಕಳ ವಸತಿ ಶಾಲೆಯ ಮಕ್ಕಳು ಗಣರಾಜ್ಯೋತ್ಸವದ ಪ್ರಯುಕ್ತ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಶಾಲೆಯ ಕಾರ್ಯದರ್ಶಿ ಸಿದ್ದೇಶ್, ನಾಗೇಶ್ ಇದ್ದಾರೆ

18/01/218 ಪ್ರಜಾವಾಣಿ

ವಿಜಯವಾಣಿ ಚಿತ್ರ



ಚಿಕ್ಕನಾಯಕನಹಳ್ಳಿ ತಾಲೂಕು ಹಾಲುಗೊಣ ಬಳಿಯಿರುವ ಸಿದ್ಧರಾಮೇಶ್ವರ ಕಿವುಡ ಮತ್ತು ಮೂಕ ಮಕ್ಕಳ ವಸತಿ ಶಾಲೆ ಕಟ್ಟಡ ನಿರ್ಮಾಣಕ್ಕೆ ಶುಕ್ರವಾರ ಗೋಡೆಕೆರೆ ಮಠದ ಶ್ರೀ ಮೃತ್ಯುಂಜಯ ದೇಶಿಕೇಂದ್ರ ಸ್ವಾಮೀಜಿ ಭೂಮಿಪೂಜೆ ನೆರವೇರಿಸಿದರು. ಶಾಲೆ ಕಾರ್ಯದರ್ಶಿ ಸಿದ್ದೇಶ್, ಉಪನ್ಯಾಸಕ ರವಿಕುಮಾರ್, ಅಧ್ಯಕ್ಷ ಚಂದ್ರಶೇಖರಯ್ಯ, ಶಾಲೆ ಶಿಕ್ಷಕ ಅಮರೇಶ್, ಗುತ್ತಿಗೆದಾರರಾದ ಲೀಲಾಶಂಕರ್, ಕಾರ್ತಿಕ್ ಇತರರು ಇದ್ದರು.

ವಿಜಯವಾಣಿ 28/04/2018

ಮತ್ತಿತರರು ಉಪಸ್ಥಿತರಿದ್ದರು.



ಚಿಕ್ಕನಾಯಕನಹಳ್ಳಿ ಪಟ್ಟಣದ ನಿವಾಸಿಗಳಾದ ಮಾನಸ ಹಾಗೂ ಮಂಜುರವರ ಮದುವೆಯ
ಸವಿನೆನಪಿಗಾಗಿ ಹಾಲುಗೊಣದ ಬಳಿ ಇರುವ ಶ್ರೀ ಸಿದ್ದರಾಮೇಶ್ವರ ಕಿವುಡ ಮತ್ತು ಮೂಗ ಮಕ್ಕಳಿಗೆ
ನೋಟ್‌ಬುಕ್, ಲೇಖನಿ ಹಾಗೂ ಸ್ವಚ್ಛತಾ ಸಾಮಗ್ರಿಗಳನ್ನು ವಿತರಿಸಲಾಯಿತು. ಪುರಸಭಾ ಸದಸ್ಯ
ಸಿ.ಡಿ.ಚಂದ್ರಶೇಖರ್, ಕೆ.ಜಿ.ಕೃಷ್ಣೇಗೌಡ, ಸಿದ್ದೇಶ್ ಮತ್ತಿತರರು ಉಪಸ್ಥಿತರಿದ್ದರು.

# ಕಷ್ಟದಲ್ಲಿರುವವರಿಗೆ ಸಹಾಯ ಮಾಡಿದರೆ ಜೀವನ ಸಾರ್ಥಕ

## ಗೋಡೆಕೆರೆ ಶ್ರೀಸಿದ್ಧರಾಮದೇಶಿಕೇಂದ್ರ ಸ್ವಾಮೀಜಿ ಸಲಹೆ | ವಾಕ್ ಮತ್ತು ಶ್ರವಣದೋಷ ಮಕ್ಕಳ ವಸತಿ ಶಾಲೆ ಉದ್ಘಾಟನೆ

■ **ವಿಜಯವಾಣಿ ಸುದ್ದಿಜಾಲ ಚಿಕ್ಕನಾಯಕನಹಳ್ಳಿ**

ಅಂಗವೈಕಲ್ಯ ಶಾಪದಿಂದ ಬರುವುದಿಲ್ಲ, ಅದು ಪ್ರಕೃತಿ ಧರ್ಮ. ಅಂಗವಿಕಲ ಮಕ್ಕಳನ್ನು ನಾವು ದೇವರಂತೆ ಕಾಣಬೇಕೆಂದು ಗೋಡೆಕೆರೆ ಸಂಸ್ಥಾನದ ಸ್ಥಿರ ಪಟ್ಟಾಧ್ಯಕ್ಷ ಶ್ರೀಸಿದ್ಧರಾಮದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು.

ಹಾಲುಗೋಣದ ಶ್ರೀ ಸಿದ್ಧರಾಮೇಶ್ವರ ವಾಕ್ ಮತ್ತು ಶ್ರವಣದೋಷ ಮಕ್ಕಳ ವಸತಿ ಶಾಲಾ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು. ದೇವರಿಗೆ ಸಮಾನಾದ ಮಕ್ಕಳನ್ನು ಕಡೆಗಣಿಸಬಾರದು. ಮಕ್ಕಳಿಗೆ ಅನುಕೂಲವಾಗುವ ಕೆಲಸ ಮಾಡಿ ದೇವರ ಕೃಪೆಗೆ ಪಾತ್ರರಾಗಬೇಕು. ಸಾಮಾಜಿಕ ಕೆಲಸ ಮಾಡಿದವರನ್ನು ಧರ್ಮ ಕಾಪಾಡುತ್ತದೆ ಎಂದರು.

ಧಾರ್ಮಿಕಾಚರಣೆಯಿಂದ ಮಾನವ ತನ್ನ ಬದುಕು ಉಳಿಸಿಕೊಳ್ಳಬೇಕಿದೆ. ದೇವರು, ಪ್ರಾಣಿಗಳಿಂತ ಭಿನ್ನವಾದ ಬದುಕನ್ನು ಮನುಷ್ಯನಿಗೆ ನೀಡಿದ್ದು, ಕಷ್ಟದಲ್ಲಿರುವವರಿಗೆ ಸಹಾಯ ಮಾಡುವ ಮೂಲಕ ಸಾರ್ಥಕಪಡಿಸಿಕೊಳ್ಳಬೇಕು ಎಂದು ಗೋಡೆಕೆರ ಸಂಸ್ಥಾನದ ಚರಪಟ್ಟಾಧ್ಯಕ್ಷ ಶ್ರೀಮೃತ್ಯುಂಜಯದೇಶಿಕೇಂದ್ರ ಸ್ವಾಮೀಜಿ ತಿಳಿಸಿದರು. ಜಿಪಂ ಮಾಜಿ ಸದಸ್ಯ ಎಚ್.ಬಿ.ಪಂಚಾಕ್ಷರಿ ಮಾತನಾಡಿ, ಅಂಗವಿಕಲರಿಗಾಗಿ ವಿಶೇಷ ಯೋಜನೆಗಳನ್ನು ರೂಪಿಸಲಾಗಿದ್ದು, ಸರ್ಕಾರದ ಅನುದಾನದಲ್ಲಿ ಶೇ.3 ಮೀಸಲಿರಿಸಲಾಗಿದೆ. ಅನೇಕ ಕಾಮಗಾರಿಗಳು ಅಂಗವಿಕಲರಿಗೆ ಸಂಬಂಧಿಸಿದ್ದರೂ ಅವುಗಳನ್ನು ಸಮರ್ಪಕವಾಗಿ ನೀಡುವಲ್ಲಿ ತಾಲೂಕು ಆಡಳಿತ ವಿಫಲವಾಗಿದೆ ಎಂದು ಆರೋಪಿಸಿದರು.

ರಾಣಿಬೆನ್ನೂರಿನ ರೇಣುಕ ಎಲ್ಲಮ್ಮ ಕಿವುಡ ಮತ್ತು ಮೂಕ ಮಕ್ಕಳ ವಸತಿ ಶಾಲೆಯ ಅಧ್ಯಕ್ಷ ಎಚ್.ಆರ್.ಶಿವಕುಮಾರ್, ರೈತಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಗೋವಿಂದರಾಜು, ಮೈಸೂರಿನ ಭಾಗ್ಯಜ್ಯೋತಿ ವಿದ್ಯಾಸಂಸ್ಥೆ ಅಧ್ಯಕ್ಷೆ ಜಗದಾಂಬ ಸದಾಶಿವಯ್ಯ, ತಹಸೀಲ್ದಾರ್ ಗಂಗೇಶ್, ರೈತ ಮುಖಂಡ ನಿಜಾನಂದಮೂರ್ತಿ, ರೇಣುಕಾ ಎಲ್ಲಮ್ಮ ಕಿವುಡ ಮತ್ತು ಮೂಕ ಮಕ್ಕಳ ಶಾಲೆಯ ಎಚ್.ಆರ್.ರೇಣುಕಾ, ಕಾರ್ಯದರ್ಶಿ ಸಿದ್ದೇಶ್, ಉಪನ್ಯಾಸಕ ಸಿ.ರವಿಕುಮಾರ್ ಇದ್ದರು.

ವಿಜಯವಾಣಿ ಚಿತ್ರ



ಚಿಕ್ಕನಾಯಕನಹಳ್ಳಿ ತಾಲೂಕು ಹಾಲುಗೋಣದ ಶ್ರೀ ಸಿದ್ಧರಾಮೇಶ್ವರ ವಾಕ್ ಮತ್ತು ಶ್ರವಣದೋಷ ಮಕ್ಕಳ ವಸತಿ ಶಾಲಾ ಉದ್ಘಾಟನಾ ಸಮಾರಂಭದಲ್ಲಿ ಗೋಡೆಕೆರ ಸಂಸ್ಥಾನದ ಸ್ಥಿರ ಪಟ್ಟಾಧ್ಯಕ್ಷ ಶ್ರೀ ಸಿದ್ಧರಾಮದೇಶಿಕೇಂದ್ರ ಸ್ವಾಮೀಜಿ, ಚರಪಟ್ಟಾಧ್ಯಕ್ಷ ಶ್ರೀ ಮೃತ್ಯುಂಜಯದೇಶಿಕೇಂದ್ರ ಸ್ವಾಮೀಜಿ, ಶಾಸಕ ಸಿ.ಬಿ.ಸುರೇಶ್‌ಬಾಬು ಮತ್ತಿತರರಿದ್ದರು.

### ಮಾಸಾಶನ ನೀಡಲು ನಿರ್ದೇಶನ

ಕಿವುಡ ಮತ್ತು ಅಂಧ ಮಕ್ಕಳು ಸೇರಿ ತಾಲೂಕಿನಲ್ಲಿರುವ ಅಂಗವಿಕಲ ಮಕ್ಕಳನ್ನು ಗುರುತಿಸಿ ಅವರಿಗೆ ಮಾಸಾಶನ ನೀಡಲು ಹೋಗಿ ವರದಿ ತರುವಂತೆ ತಾಲೂಕು ಆಡಳಿತಕ್ಕೆ ನಿರ್ದೇಶನ ನೀಡಿದ್ದೇನೆ ಎಂದು ಶಾಸಕ ಸಿ.ಬಿ.ಸುರೇಶ್‌ಬಾಬು ಹೇಳಿದರು.

ಶ್ವರ ದೇವಾಲಯದ ಸಮುದಾಯ ಭವನದಲ್ಲಿ ಮೇ 18ರ ಬೆಳಗ್ಗೆ 11ಗಂಟೆಗೆ ಶಾಸಕ ಸಿ.ಬಿ.ಸುರೇಶ್‌ಬಾಬು ಅಧ್ಯಕ್ಷತೆಯಲ್ಲಿ ಬುಕ್ಕಪಟ್ಟಣ ಹೋಬಳಿ ಮಟ್ಟದ ಜೆಡಿಎಸ್ ಕಾರ್ಯಕರ್ತರ ಸಭೆ ಕರೆಯಲಾಗಿದೆ.

ಕವಿ ಮಾತು ■ ಸರ್ಕಾರಿ ಸವಲತ್ತು ಕುರಿತು ಅಧಿಕಾರಿಗಳು ಮಾಹಿತಿ ನೀಡಲಿ ■ ಅಂಗವಿಕಲ ಮಕ್ಕಳಿಗೆ ವೈದ್ಯಕೀಯ ಮೌಲ್ಯಂಕನ ಶಿಬಿರದಲ್ಲಿ ಮುದ್ದಹನುಮೇಗೌಡ ಸಲಹೆ

# 'ಅಂಗವಿಕಲತೆ ವೈಫಲ್ಯವೆಂದು ತಿಳಿಯದೇ ಸಾಧನೆ ಮಾಡಿ'

**ಚಿಕ್ಕನಾಯಕನಹಳ್ಳಿ:** ಸಾಧನೆಗೆ ಸಾಕಷ್ಟು ಅಂಗವಿಕಲರೇ ಮಾದರಿಯಾಗಿದ್ದು ಅಂಗವಿಕಲತೆ ವೈಫಲ್ಯವೆಂದು ಕೊರಗದೆ ಮುಂದಿನ ಗುರಿಗಾಗಿ ಯೋಚಿಸಬೇಕು ಎಂದು ಸಂಸದ ಎಸ್.ಪಿ.ಮುದ್ದಹನುಮೇಗೌಡ ಕಿವಿಮಾತು ಹೇಳಿದರು.

ಪಟ್ಟಣದ ಸ್ತ್ರೀಶಕ್ತಿ ಭವನದಲ್ಲಿ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಹಾಗೂ ಸರ್ವ ಶಿಕ್ಷಣ ಅಭಿಯಾನದ ವತಿಯಿಂದ ಏರ್ಪಡಿಸಿದ್ದ 1ರಿಂದ 9ನೇ ತರಗತಿ ವಿಶೇಷ ಚೇತನ ಮಕ್ಕಳಿಗೆ ವೈದ್ಯಕೀಯ ಮೌಲ್ಯಂಕನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಈ ಬಾರಿಯ ಐಎಎಸ್ ಪರೀಕ್ಷೆಯಲ್ಲಿ ದೃಷ್ಟಿ ಇಲ್ಲದವರು ತೇರ್ಗಡೆಯಾಗಿದ್ದು ಅಂತಹವರನ್ನು ಮಾದರಿಯನ್ನಾಗಿ ಮಾಡಿಕೊಳ್ಳಬೇಕು. ತಮ್ಮಲ್ಲಿರುವ ಕೀಳರಿಮೆ ಭಾವ ತೊರೆಯಲು ಪೋಷಕರು ಸಹಕರಿಬೇಕು. ಈ ಶಿಬಿರದಿಂದ ಅಂಗವಿಕಲರ ಬಗೆಗಿನ ಸೌಕರ್ಯಗಳ ಮಾಹಿತಿ ಫಲಾನುಭವಿಗಳಿಗೆ ದೊರೆಯುವಂತಾಗಬೇಕು ಎಂದರಲ್ಲದೆ ಸರ್ಕಾರದಿಂದ ವಿಶೇಷ ಚೇತನರಿಗೆ ದೊರೆಯುತ್ತಿರುವ ಸೌಲಭ್ಯ, ಮೀಸಲಾತಿ ಉಪಯೋಗಿಸಿಕೊಳ್ಳುವಂತೆ ಸಲಹೆ ನೀಡಿದರು.

**ಪೋಷಕರನ್ನು ಶ್ಲಾಘಿಸುವೆ:** ಶಾಸಕ ಸಿ.ಬಿ.ಸುರೇಶ್‌ಬಾಬು, ಅಂಗಾಂಗ ವೈಫಲ್ಯಕ್ಕೆ ಅಪೌಷ್ಟಿಕತೆ ಹಾಗೂ ರಕ್ತಸಂಬಂಧಿಗಳೊಂದಿಗೆ ಮದುವೆ ಕಾರಣ. ಈ ಬಗ್ಗೆ ಪೋಷಕರು ಜಾಗೃತಿ ವಹಿಸಬೇಕು.ಅಂಗವಿಕಲರಾಗಿ ಹುಟ್ಟಿದ ಮಕ್ಕಳು ದೊಡ್ಡವರಾದರೂ ಮುದ್ದು ಮಕ್ಕಳಂತೆಯೇ ಅವರನ್ನು ಪೋಷಕರು ಸಲಹುವುದು ದೊಡ್ಡ ವಿಷಯ. ಈ ಬಗ್ಗೆ ಅವರನ್ನು ಶ್ಲಾಘಿಸುತ್ತೇನೆಂದರು.

ಮನೆಯಿಂದ ಹೊರಗಡೆ ಬರುವುದಕ್ಕೆ ಸಾಧ್ಯವಾಗದ ಅಂಗವಿಕಲರನ್ನು ಗುರುತಿಸಿ ಇಲಾಖೆ ಸಿಬ್ಬಂದಿ ಅವರು ಇರುವಲ್ಲಿಗೆ ತೆರಳಿ ಸವಲತ್ತು ವಿತರಿಸುವ ಕಾರ್ಯ ಮಾಡಿ ಎಂದು ಸಲಹೆ ನೀಡಿದರು.

**ಅನುದಾನ ಹೆಚ್ಚಿಸಿ:** ಜಿಪಂ ಸದಸ್ಯ ಮಹಾಲಿಂಗಯ್ಯ, ಅಂಗವಿಕಲ ಮಕ್ಕಳಿಗಾಗಿಯೇ ಸರ್ಕಾರ ಅನುದಾನದ ಹಣವನ್ನು ಮೀಸಲಿಡುತ್ತಿದ್ದು ಈ ಹಣ ಇನ್ನಷ್ಟು ಹೆಚ್ಚಬೇಕು. ಈ ಮೂಲಕ ಫಲಾನುಭವಿಗಳಿಗೆ ಸೌಕರ್ಯ ದೊರಕಿ ಅವರ ಆರ್ಥಿಕತೆಗೆ ಸಹಾಯವಾಗಲಿದೆ ಎಂದು ತಿಳಿಸಿದರು.



**ಚಿಕ್ಕನಾಯಕನಹಳ್ಳಿ ಪಟ್ಟಣದ ಸ್ತ್ರೀಶಕ್ತಿ ಭವನದಲ್ಲಿ ನಡೆದ ಅಂಗವಿಕಲ ಮಕ್ಕಳ ವೈದ್ಯಕೀಯ ಮೌಲ್ಯಂಕನ ಶಿಬಿರವನ್ನು ಸಂಸದ ಎಸ್.ಪಿ.ಮುದ್ದಹನುಮೇಗೌಡ ಉದ್ಘಾಟಿಸಿದರು. ಶಾಸಕ ಸಿ.ಬಿ.ಸುರೇಶ್‌ಬಾಬು, ಜಿಪಂ ಸದಸ್ಯ ಮಹಲಿಂಗಯ್ಯ ಮತ್ತಿತರರಿದ್ದರು.**

ಬಿಇಒ ಕೃಷ್ಣಮೂರ್ತಿ, ಈ ಶಿಬಿರವನ್ನು ಶಿಕ್ಷಣ ಇಲಾಖೆ ಸರ್ವ ಶಿಕ್ಷಣ ಅಭಿಯಾನ ಹಾಗೂ ಆರ್ ಎಂಎಸ್ಎ ಯೋಜನೆಯಡಿ ಹಮ್ಮಿಕೊಂಡಿದ್ದು, ಪ್ರಾಥಮಿಕ ಮತ್ತು ಪ್ರೌಢಶಾಲಾ ಅಂಗವಿಕಲ ಮಕ್ಕಳಿಗೆ ಅನ್ವಯವಾಗಲಿದೆ ಎಂದು ನುಡಿದರು.

**ಅಂಗವಿಕಲತೆ ಶಾಪವಲ್ಲ ಅದನ್ನು ಮೆಟ್ಟಿನಿಲ್ಲುವುದೇ ಸಾಧನೆ. ಅಪೌಷ್ಟಿಕತೆ ಹಾಗೂ ರಕ್ತ ಸಂಬಂಧದ ಮದುವೆ, ಬಾಲ್ಯವಿವಾಹ ಇನ್ನಿತರ ಕಾರಣದಿಂದ ಅಂಗವಿಕಲತೆ ಹೆಚ್ಚುತ್ತಿದೆ. ಈ ಬಗ್ಗೆ ಪೋಷಕರು ಗಮನ ಹರಿಸಿ ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಕಾಳಜಿ ವಹಿಸಿ.**

**● ಸಿ.ಡಿ.ಚಂದ್ರಶೇಖರ್,**
ಪುರಸಭಾಧ್ಯಕ್ಷ

ಕಾರ್ಯಕ್ರಮದಲ್ಲಿ ಜಿಪಂ ಸದಸ್ಯೆ ಮಂಜುಳಮ್ಮ, ತಾಪಂ ಅಧ್ಯಕ್ಷೆ ಹೊನ್ನಮ್ಮ, ಉಪಾಧ್ಯಕ್ಷ ಟಿ.ಜಿ.ತಿಮ್ಮಯ್ಯ, ಪುರಸಭಾ ಸದಸ್ಯರಾದ ಎಂ.ಕೆ.ರವಿಚಂದ್ರ, ಕೆ.ಜಿ.ಕೃಷ್ಣೇಗೌಡ, ತಾಪಂ ಸದಸ್ಯ ಸಚಿನ್, ರೋಟರಿ ಕ್ಲಬ್ ಅಧ್ಯಕ್ಷ ಮಿಲಿಟರಿ ಶಿವಣ್ಣ ಬಿಇಒ ಕೃಷ್ಣಮೂರ್ತಿ, ಕ್ಷೇತ್ರ ಸಮನ್ವಯಾಧಿಕಾರಿ ಬಿ.ಕೆ.ಸಂಗಮೇಶ್, ಬಿಆರ್‌ಪಿ ಪ್ರದೀಪ್ ಮತ್ತಿತರರಿದ್ದರು.

# ಮೇ 15 : ವಸತಿ ಶಾಲೆ ಉದ್ಘಾಟನಾ ಸಮಾರಂಭ



**ಚಿಕ್ಕನಾಯಕನಹಳ್ಳಿ**

ತಾಲ್ಲೂಕಿನ ಶೆಟ್ಟಿಕೆರೆ ಹೋಬಳಿ ಹಾಲುಗೊಣದ ಬಳಿ ಇರುವ ಯಶಸ್ವಿನಿ ಎಜುಕೇಷನ್ ಸೊಸೈಟಿ ವತಿಯಿಂದ ನಡೆಯುತ್ತಿರುವ ಶ್ರೀ ಸಿದ್ದರಾಮೇಸ್ವರ ವಾಕ್ ಮತ್ತು ಶ್ರವಣ ದೋಷ ಮಕ್ಕಳ ವಸತಿ ಶಾಲೆ ಉದ್ಘಾಟನಾ ಸಮಾರಂಭ ಮೇ 15ರಂದು ಬೆಳಗ್ಗೆ 10ಕ್ಕೆ ವಸತಿ ಶಾಲಾ ಆವರಣದಲ್ಲಿ ನಡೆಯಲಿದೆ ಎಂದು ಟ್ರಸ್ಟ್ ಕಾರ್ಯದರ್ಶಿ ಬಿ.ಸಿ.ಸಿದ್ದೇಶ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿಮಾತನಾಡಿದಅವರು, ಕೆರೆಗೋಡಿ ರಂಗಾಪುರದ ಶ್ರೀ ಗುರುಪರದೇಶೀಕೇಂದ್ರಸ್ವಾಮೀಜಿ ದಿವ್ಯ ಸಾನಿದ್ಯ ವಹಿಸುವರು. ಗೋಡೆಕೆರೆಯ ಸಿದ್ದರಾಮ ದೇಶೀಕೇಂದ್ರ ಸ್ವಾಮೀಜಿ ಹಾಗೂ ಮೃತ್ಯುಂಜಯ ದೇಶೀಕೇಂದ್ರ ಸ್ವಾಮೀಜಿ ಆಶೀರ್ವಚನ ನೀಡುವರು. ಸಂಸದ ಎಸ್.ಪಿ.ಮುದ್ದಹನುಮೇಗೌಡ ಕಾರ್ಯಕ್ರಮ ಉದ್ಘಾಟಿಸುವರು. ಮೈಸೂರು ಭಾಗ್ಯಜ್ಯೋತಿ ವಿದ್ಯಾಸಂಸ್ಥೆಯ ಜಗದಾಂಬ ಸದಾಶಿವಯ್ಯ ಅಧ್ಯಕ್ಷತೆ ವಹಿಸುವರು. ಶಾಸಕ ಸಿ.ಬಿ.ಸುರೇಶ್‌ಬಾಬು, ಮಾಜಿ ಶಾಸಕ ಜೆ.ಸಿ.ಮಾಧುಸ್ವಾಮಿ, ಜಿ.ಪಂ.ಸದಸ್ಯ ಕಲ್ಲೇಶ್, ತಾ.ಪಂ.ಕಾರ್ಯನಿರ್ವಹಣಾಧಿಕಾರಿ ಕೃಷ್ಣಮೂರ್ತಿ, ಮಾಜಿ ಜಿ.ಪಂ.ಸದಸ್ಯ ಹೆಚ್.ಬಿ.ಪಂಚಾಕ್ಷರಿ, ಕಾಂಗ್ರೆಸ್ ಮುಖಂಡ ಸಾಸಲು ಸತೀಶ್ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಟ್ರಸ್ಟ್ ಅಧ್ಯಕ್ಷ ಚಂದ್ರಶೇಖರಯ್ಯ ಹಾಗೂ ನಿರ್ದೇಶಕ ಮಾಳಿಗೆಹಳ್ಳಿ ಎಂ.ಎಸ್.ಸಿದ್ದಯ್ಯ ಹಾಜರಿದ್ದರು.

ಪ್ರಜಾಪ್ರಗತಿ. ದಿನಾಂಕ. 11 ಮೇ. 2017. ಗುರುವಾರ.

## ■ 15ಕ್ಕೆ ವಾಕ್-ಶ್ರವಣ ದೋಷ ಶಾಲೆ ಉದ್ಘಾಟನೆ

**ಚಿಕ್ಕನಾಯಕನಹಳ್ಳಿ:** ತಾಲೂಕಿನ ಶೆಟ್ಟಿಕೆರೆ ಹೋಬಳಿ ಹಾಲುಗೊಣದ ಬಳಿ ಇರುವ ಯಶಸ್ವಿನಿ ಎಜುಕೇಷನ್ ಸೊಸೈಟಿ ವತಿಯಿಂದ ನಡೆಯುತ್ತಿರುವ ಶ್ರೀ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣ ದೋಷ ಮಕ್ಕಳ ವಸತಿ ಶಾಲೆ ಉದ್ಘಾಟನೆ ಮೇ 15ರ ಬೆಳಗ್ಗೆ 10ಕ್ಕೆ ವಸತಿ ಶಾಲಾ ಆವರಣದಲ್ಲಿ ನಡೆಯಲಿದೆ ಎಂದು ಟ್ರಸ್ಟ್ ಕಾರ್ಯದರ್ಶಿ ಬಿ.ಸಿ.ಸಿದ್ದೇಶ್ ತಿಳಿಸಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುಧವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೆರೆಗೋಡಿ ರಂಗಾಪುರದ ಶ್ರೀ ಗುರುಪರದೇಶೀ ಕೇಂದ್ರಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಗೋಡೆಕೆರೆ ಸಿದ್ದರಾಮ ದೇಶೀಕೇಂದ್ರ ಸ್ವಾಮೀಜಿ ಹಾಗೂ ಮೃತ್ಯುಂಜಯ ದೇಶೀಕೇಂದ್ರ ಸ್ವಾಮೀಜಿ ಆಶೀರ್ವಚನ ನೀಡುವರು. ಸಂಸದ ಎಸ್.ಪಿ.ಮುದ್ದಹನುಮೇಗೌಡ ಉದ್ಘಾಟಿಸುವರು. ಮೈಸೂರು ಭಾಗ್ಯಜ್ಯೋತಿ ವಿದ್ಯಾಸಂಸ್ಥೆ ಜಗದಾಂಬ ಅಧ್ಯಕ್ಷತೆ ವಹಿಸುವರು. ಶಾಸಕ ಸಿ.ಬಿ.ಸುರೇಶ್‌ಬಾಬು, ಮಾಜಿ ಶಾಸಕ ಜೆ.ಸಿ.ಮಾಧುಸ್ವಾಮಿ, ಜಿಪಂ ಸದಸ್ಯ ಕಲ್ಲೇಶ್, ತಾಪಂ ಇಒ ಕೃಷ್ಣಮೂರ್ತಿ, ಜಿಪಂ ಮಾಜಿ ಸದಸ್ಯ ಎಚ್.ಬಿ.ಪಂಚಾಕ್ಷರಿ, ಕಾಂಗ್ರೆಸ್ ಮುಖಂಡ ಸಾಸಲು ಸತೀಶ್ ಮತ್ತಿತರರು ಭಾಗವಹಿಸಲಿದ್ದಾರೆ. ಪತ್ರಿಕಾಗೋಷ್ಠಿಯಲ್ಲಿ ಟ್ರಸ್ಟ್ ಅಧ್ಯಕ್ಷ ಚಂದ್ರಶೇಖರಯ್ಯ ಹಾಗೂ ನಿರ್ದೇಶಕ ಮಾಳಿಗೆಹಳ್ಳಿ ಎಂ.ಎಸ್. ಸಿದ್ದಯ್ಯ ಇದ್ದರು.

ಉದಯವಾಣಿ ಪತ್ರಿಕೆ.
ದಿನಾಂಕ 11, ಮೇ 2017
ಗುರುವಾರ

## ವಸತಿ ಶಾಲೆ ಉದ್ಘಾಟನೆ

■ **ವಿಕ ಸುದ್ದಿಲೋಕ** ಚಿಕ್ಕನಾಯಕನಹಳ್ಳಿ

ತಾಲೂಕಿನ ಶೆಟ್ಟಿಕೆರೆ ಹೋಬಳಿ ಹಾಲುಗೊಣದ ಬಳಿ ಇರುವ ಯಶಸ್ವಿನಿ ಎಜುಕೇಷನ್ ಸೊಸೈಟಿ ವತಿಯಿಂದ ನಡೆಯುತ್ತಿರುವ ಶ್ರೀ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣ ದೋಷ ಮಕ್ಕಳ ವಸತಿ ಶಾಲೆ ಉದ್ಘಾಟನಾ ಸಮಾರಂಭ ಮೇ 15ರಂದು ಬೆಳಗ್ಗೆ 10ಕ್ಕೆ ವಸತಿ ಶಾಲಾ ಆವರಣದಲ್ಲಿ ನಡೆಯಲಿದೆ ಎಂದು ಟ್ರಸ್ಟ್ ಕಾರ್ಯದರ್ಶಿ ಬಿ.ಸಿ.ಸಿದ್ದೇಶ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುಧವಾರ ಸುದ್ದಿಗಾರರಿಗೆ ವಿಷಯ ತಿಳಿಸಿದ ಅವರು, ಕೆರೆಗೋಡಿ ರಂಗಾಪುರದ ಶ್ರೀಗುರುಪರದೇಶೀಕೇಂದ್ರಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸುವರು. ಗೋಡೆಕೆರೆಯ ಸಿದ್ಧರಾಮ ದೇಶೀ ಕೇಂದ್ರ ಸ್ವಾಮೀಜಿ ಹಾಗೂ ಮೃತ್ಯುಂಜಯ ದೇಶೀಕೇಂದ್ರ ಸ್ವಾಮೀಜಿ ಆಶೀರ್ವಚನ ನೀಡುವರು. ಸಂಸದ ಮುದ್ದಹನುಮೇಗೌಡ ಕಾರ್ಯಕ್ರಮ ಉದ್ಘಾಟಿಸುವರು.

ಮೈಸೂರು ಭಾಗ್ಯಜ್ಯೋತಿ ವಿದ್ಯಾಸಂಸ್ಥೆಯ ಜಗದಾಂಬ ಸದಾಶಿವಯ್ಯ ಅಧ್ಯಕ್ಷತೆ ವಹಿಸುವರು. ಶಾಸಕ ಸಿ.ಬಿ.ಸುರೇಶ್‌ಬಾಬು , ಮಾಜಿ ಶಾಸಕ ಜೆ.ಸಿ.ಮಾಧುಸ್ವಾಮಿ, ಜಿಪಂ ಸದಸ್ಯ ಕಲ್ಲೇಶ್, ತಾಪಂ ಕಾರ್ಯನಿರ್ವಹಣಾಧಿಕಾರಿ ಕೃಷ್ಣಮೂರ್ತಿ, ಮಾಜಿ ಜಿಪಂ ಸದಸ್ಯ ಹೆಚ್.ಬಿ.ಪಂಚಾಕ್ಷರಿ, ಕಾಂಗ್ರೆಸ್ ಮುಖಂಡ ಸಾಸಲು ಸತೀಶ್ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

ವಿಜಯ ಕರ್ನಾಟಕ.
ದಿನಾಂಕ. 11 ಮೇ 2017
ಗುರುವಾರ.

# ಅಂಗವಿಕಲರಿಗೆ ಅವಕಾಶ ಅಗತ್ಯ

ಪ್ರಜಾವಾಣಿ ವಾರ್ತೆ

**ಚಿಕ್ಕನಾಯಕನಹಳ್ಳಿ:** 'ಅಂಗವಿಕಲರಿಗೆ ಸಮಾಜದ ಅನುಕಂಪ ಬೇಕಿಲ್ಲ. ಭದ್ರತೆ ಹಾಗೂ ಬದುಕುವ ಅವಕಾಶಗಳು ಬೇಕು' ಎಂದು ಶಾಸಕ ಸಿ.ಬಿ.ಸುರೇಶ್‌ಬಾಬು ಹೇಳಿದರು.

ತಾಲ್ಲೂಕಿನ ಹಾಲುಗೋಣ ಬಳಿಯ ಸಿದ್ಧರಾಮೇಶ್ವರ ವಾಕ್ ಮತ್ತು ಶ್ರವಣದೋಷ ಮಕ್ಕಳ ವಸತಿ ಶಾಲೆಯನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದರು.

ರಾಣೆಬೆನ್ನೂರು ರೇಣುಕ ಎಲ್ಲಮ್ಮ ಕಿವುಡ ಮತ್ತು ಮೂಕ ಮಕ್ಕಳ ವಸತಿ ಶಾಲೆಯ ಅಧ್ಯಕ್ಷ ಎಚ್.ಆರ್.ಶಿವ ಕುಮಾರ್ ಮಾತನಾಡಿ, 'ಅಂಧ ಹಾಗೂ ಶ್ರವಣದೋಷವುಳ್ಳ ಮಕ್ಕಳಿಗೆ ಸಂಸದರು ಹಾಗೂ ಶಾಸಕರು ತಮ್ಮ ಸ್ಥಳೀಯ ಅಭಿವೃದ್ಧಿ ಯೋಜನೆಯಡಿ ಶೇ 3 ರಷ್ಟು ಅನುದಾನವನ್ನು ಮೀಸಲಿಡಬೇಕು' ಎಂದರು.



ಸಿದ್ಧರಾಮೇಶ್ವರ ವಾಕ್ ಮತ್ತು ಶ್ರವಣದೋಷ ಮಕ್ಕಳ ವಸತಿ ಶಾಲೆಯನ್ನು ಶಾಸಕ ಸಿ.ಬಿ.ಸುರೇಶ್‌ಬಾಬು ಉದ್ಘಾಟಿಸಿದರು. ಗೋಡೆಕೆರೆ ಸಿದ್ಧರಾಮದೇಶೀಕೇಂದ್ರ ಸ್ವಾಮೀಜಿ, ಮೃತ್ಯುಂಜಯ ದೇಶೀಕೇಂದ್ರ ಸ್ವಾಮೀಜಿ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಪಂಚಾಕ್ಷರಯ್ಯ ಇದ್ದರು

ಗೋಡೆಕೆರೆ ಮೃತ್ಯುಂಜಯ ದೇಶೀ ಕೇಂದ್ರ ಸ್ವಾಮೀಜಿ, 'ಎಲ್ಲರೂ ಧಾರ್ಮಿಕ ಚೌಕಟ್ಟಿನಲ್ಲಿ ಬದುಕಬೇಕು. ಅಶಕ್ತರಿಗೆ ಸಹಕಾರ ನೀಡುವುದು ಜೀವನದ ಗುರಿಯಾಗಬೇಕು' ಎಂದು ಹೇಳಿದರು.

ಸ್ಥಿರಪಟ್ಟಾಧ್ಯಕ್ಷ ಸಿದ್ಧರಾಮದೇಶೀ ಕೇಂದ್ರ ಸ್ವಾಮೀಜಿ ಮಾತನಾಡಿದರು. ರೈತ ಸಂಘದ ಚಿದಾನಂದಮೂರ್ತಿ ಗೋವಿಂದರಾಜ್, ತಹಶೀಲ್ದಾರ್ ಆರ್.ಗಂಗೇಶ್, ಜಗದಾಂಬ ಸದಾ ಶಿವಯ್ಯ, ಸಂಸ್ಥೆ ಕಾರ್ಯದರ್ಶಿ ಸಿದ್ದೇಶ್, ಉಪನ್ಯಾಸಕ ಸಿ.ರವಿಕುಮಾರ್ ಉಪಸ್ಥಿತರಿದ್ದರು.

ಪ್ರಜಾವಾಣಿ 17/05/2017

# ಅಂಗವಿಕಲರ ಜೀವನ ಭದ್ರತೆಗೆ ಸಹಕರಿಸಿ

## ■ ಅನುಕಂಪದ ಬದಲು ಜೀವನ ನೀಡಿ: ಶಾಸಕ ಸಿ.ಬಿ.ಸುರೇಶ್‌ಬಾಬು ಕರೆ

**ಚಿಕ್ಕನಾಯಕನಹಳ್ಳಿ:** ಅಂಗವಿಕಲರನ್ನು ಅನುಕಂಪದ ಬದಲು ಅವರ ಜೀವನದ ಭದ್ರತೆಗೆ ಹೆಚ್ಚು ಒತ್ತು ನೀಡುವುದು ನಮ್ಮೆಲ್ಲರ ಕರ್ತವ್ಯ ಎಂದು ಶಾಸಕ ಸಿ.ಬಿ.ಸುರೇಶ್‌ಬಾಬು ಹೇಳಿದರು.

ತಾಲೂಕು ಹಾಲುಗೋಣದ ಸಮೀಪದ ಶ್ರೀ ಸಿದ್ಧರಾಮೇಶ್ವರ ವಾಕ್ ಮತ್ತು ಶ್ರವಣದೋಷ ಮಕ್ಕಳ ವಸತಿ ಶಾಲೆಯನ್ನು ಉದ್ಘಾಟಿಸಿ ಮಾತನಾಡಿ, ಪುಟ್ಟರಾಜಗವಾಯಿಗಳು ಕಣ್ಣಿಲ್ಲದಿದ್ದರೂ ಸಾವಿರಾರು ಅಂದ ಮಕ್ಕಳಿಗೆ ಜೀವನದ ಮಾರ್ಗದರ್ಶಕರಾಗಿ ಜೀವನ ನಡೆಸುವ ಮಾರ್ಗ ತೋರಿಸಿಕೊಟ್ಟರು, ಅದೇ ರೀತಿ ಈ ಸಂಸ್ಥೆಯ ಉತ್ತಮ ಕಾರ್ಯಕ್ಕೆ ನಾನು ಸಹಕಾರ ನೀಡುವುದಾಗಿ ತಿಳಿಸಿದ ಅವರು ಈಗಾಗಲೇ ತಾಲೂಕು ಆಡಳಿತಕ್ಕೆ ಕಿವುಡ ಅಂದ ಮಕ್ಕಳು ಸೇರಿದಂತೆ ತಾಲೂಕಿನಲ್ಲಿರುವ ಅಂಗವಿಕಲ ಮಕ್ಕಳನ್ನು ಗುರುತಿಸಿ ಅವರಿಗೆ ಮಾಸಾಶನ ನೀಡಲು ಮನೆ ಮನೆಗಳಿಗೆ ಹೋಗಿ ವರದಿ ತಂದು ಮಾಸಾಶನ ನೀಡುವಂತೆ ತಾಲೂಕು ಆಡಳಿತಕ್ಕೆ ನಿರ್ದೇಶನ ನೀಡಿದ್ದೇನೆ ಎಂದರು.



ಚಿಕ್ಕನಾಯಕನಹಳ್ಳಿ ತಾಲೂಕು ಹಾಲುಗೋಣದ ಸಮೀಪದ ಶ್ರೀ ಸಿದ್ಧರಾಮೇಶ್ವರ ವಾಕ್ ಮತ್ತು ಶ್ರವಣದೋಷ ಮಕ್ಕಳ ವಸತಿ ಶಾಲೆಯ ಕಾರ್ಯಕ್ರಮದ ಉದ್ಘಾಟನೆಯನ್ನು ಶಾಸಕ ಸಿ.ಬಿ.ಸುರೇಶ್‌ಬಾಬು ನೆರವೇರಿಸಿದರು.

**ಸವಲತ್ತು ನೀಡಲು ಮನವಿ:** ರಾಣೆಬೆನ್ನೂರು ರೇಣುಕ ಎಲ್ಲಮ್ಮ ಕಿವುಡ ಮತ್ತು ಮೂಕ ಮಕ್ಕಳ ವಸತಿ ಶಾಲೆಯ ಅಧ್ಯಕ್ಷ ಹೆಚ್. ಆರ್.ಶಿವಕುಮಾರ್ ಮಾತನಾಡಿ, ಅಂಧ ಹಾಗೂ ಶ್ರವಣದೋಷ ಪ್ರಪಂಚದಲ್ಲಿ ಸಾಮಾನ್ಯವಾಗಿದ್ದು ಇಂತಹ ಮಕ್ಕಳ ಬಗ್ಗೆ ಸರಕಾರ ಪ್ರತ್ಯೇಕ ಇಲಾಖೆಯಿದೆ ಇದನ್ನು ರಾಮಕೃಷ್ಣ ಹೆಗ್ಗಡೆಯವರು ಸ್ಥಾಪನೆ ಮಾಡಿದ್ದಾರೆ. ಸಂಸದರು ಹಾಗೂ ಶಾಸಕರ ಸ್ಥಳೀಯಭಿವೃದ್ಧಿ ಯೋಜನೆಯ ಶೇ.3 ರಷ್ಟು ವಿಕಲ ಚೇತನ ಮಕ್ಕಳ ಕಲ್ಯಾಣಕ್ಕಾಗಿ ವಿನಿಯೋಗಿಸಲು ಅವಕಾಶವಿದ್ದು, ಶಾಸಕರು ಸಿದ್ಧರಾಮೇಶ್ವರ ವಾಕ್ ಮತ್ತು ಶ್ರವಣ ದೋಷ ಮಕ್ಕಳ ಮೂಲಭೂತ ಸೌಕರ್ಯಕ್ಕೆ ನೀಡುವಂತೆ ಮನವಿ ಮಾಡಿದರು.

ಗೋಡೆಕೆರೆ ಶ್ರೀ ಮೃತ್ಯುಂಜಯ ದೇಶೀಕೇಂದ್ರಸ್ವಾಮೀಜಿ ಮಾತನಾಡಿ, ಎಲ್ಲರೂ ಧಾರ್ಮಿಕ ಚೌಕಟ್ಟಿನಲ್ಲಿ ಬದುಕಬೇಕು, ಪ್ರಾಣಿಗಿಂತ ಬಿನ್ನವಾಗಿ ಬದುಕನ್ನು ನೀಡಿರುವ ಮನುಷ್ಯ ತನ್ನ ಬದುಕನ್ನು ಪರೋಪ ಕಾರ್ಯ ಮಾಡುವುದರಿಂದ ತಮ್ಮ ಬದುಕನ್ನು ಸಾರ್ಥಕ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಗೋಡೆಕೆರೆಯ ಶ್ರೀ ಸಿದ್ಧರಾಮದೇಶೀಕೇಂದ್ರ ಸ್ವಾಮೀಜಿ, ಮಾಜಿ ಜಿಪಂ ಸದಸ್ಯ ಪಂಚಾಕ್ಷರಯ್ಯ, ರೈತ ಸಂಘದ ಚಿದಾನಂದಮೂರ್ತಿ ಗೋವಿಂದರಾಜ್, ತಹಶೀಲ್ದಾರ್ ಆರ್.ಗಂಗೇಶ್ ಇತರರಿದ್ದರು.

ನೀಡಿದರೂ ಕ್ರಮ ಕೈಗೊಂಡಿಲ್ಲ. ...



ಸಿದ್ಧರಾಮೇಶ್ವರ ವಾಕ್ ಮತ್ತು ಶ್ರವಣದೋಷ ಮಕ್ಕಳ ವಸತಿ ಶಾಲೆಯಲ್ಲಿ ಸಕ್ಷಮ ಸಂಸ್ಥೆಯಿಂದ ಇತ್ತೀಚೆಗೆ ವಿಶ್ವಪರಿಸರ ದಿನ ಆಚರಿಸಲಾಯಿತು

# ವೃಕ್ಷ ಅಭಿಯಾನ ಬೆಂಬಲಿಸಿ

ಚಿಕ್ಕನಾಯಕನಹಳ್ಳಿ: 'ಸಮರ್ಥ ಭಾರತ ದಿಂದ ಕೋಟಿ ವೃಕ್ಷ ಬೆಳೆಸುವ ಅಭಿ ಯಾನ ಹಮ್ಮಿಕೊಂಡಿದ್ದು, ಪ್ರತಿ ಯೊಬ್ಬರೂ ಒಂದು ಗಿಡ ನೆಟ್ಟು ಈ ಅಭಿ ಯಾನ ಬೆಂಬಲಿಸಬೇಕು' ಎಂದು ಸಂಸ್ಕಾರ ಭಾರತಿ ಅಧ್ಯಕ್ಷ ರಮೇಶ್ ಕೆಂಬಾಳ್ ಹೇಳಿದರು.

ತಾಲ್ಲೂಕಿನ ಹಾಲುಗೊಣದ ಸಿದ್ಧರಾಮೇಶ್ವರ ವಾಕ್ ಮತ್ತು ಶ್ರವಣ ದೋಷ ಮಕ್ಕಳ ವಸತಿ ಶಾಲೆಯಲ್ಲಿ ಸಕ್ಷಮ ಸಂಸ್ಥೆಯಿಂದ ಇತ್ತೀಚೆಗೆ ನಡೆದ ವಿಶ್ವಪರಿಸರ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಸಕ್ಷಮ ಸಂಸ್ಥೆ ಜಿಲ್ಲಾ ಘಟಕದ ಅಧ್ಯಕ್ಷೆ ಡಾ.ಶೈಲಾ.ಮ.ಬದಾಮಿ, 'ಪರಿಸರ ನಾಶದಿಂದ ಅಮೃತ ಸಮಾನವಾದ ತಾಯಿಯ ಹಾಲು ಕೂಡಾ ಮಲಿನಗೊಂಡಿದೆ. ದೋಷಯುಕ್ತ ಹಾಲು ಸೇವಿಸುವು ದರಿಂದ ಮಗುವು ಕಾಯಿಲೆಗಳಿಗೆ ತುತ್ತಾಗುತ್ತಿದೆ' ಎಂದರು.

ಉಪನ್ಯಾಸಕ ಗಂಗಾಧರ್, ಜಿಲ್ಲಾ ಪಂಚಾಯಿತಿ ಸದಸ್ಯ ಕಲ್ಲೇಶ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಹಲವು ಅಂಗವಿಕಲರು ಸಸಿ ನೆಟ್ಟಿದ್ದು ವಿಶೇಷವಾಗಿತ್ತು. ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಎಸ್.ರವಿಕುಮಾರ್, ಉಪನ್ಯಾಸಕ ರಾದ ಸಿ.ರವಿಕುಮಾರ್, ಧನಂಜಯ ಮೂರ್ತಿ, ಕುಸುಮಾ, ಶಿವಾನಂದ್, ಷಣ್ಮುಖಿ, ಹೇಮಂತ್ ಇದ್ದರು.

05 ಪ್ರಜಾ ಪ್ರಗತಿ ಕನ್ನಡ ದಿನಪತ್ರಿಕೆ
17 ಆಗಸ್ಟ್ 2016 ಬುಧವಾರ



ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಹಾಲುಗೊಣದ ಶ್ರೀಸಿದ್ದರಾಮೇಶ್ವರ ಕಿವುಡ ಹಾಗೂ ಮೂಕ ಮಕ್ಕಳ ವಸತಿ ಶಾಲೆಯಲ್ಲಿ ಸ್ವಾತಂತ್ರ್ಯೋತ್ಸವಾಚರಣೆ ಆಚರಿಸಲಾಯಿತು.

ಪ್ರಜಾವಾಣಿ ಗುರುವಾರ ● ಡಿಸೆಂಬರ್ 15, 2016

# ಮಕ್ಕಳನ್ನು ಪ್ರೋತ್ಸಾಹಿಸಿ

ಪ್ರಜಾವಾಣಿ ವಾರ್ತೆ

ಚಿಕ್ಕನಾಯಕನಹಳ್ಳಿ: ಶಾಲೆಯಲ್ಲಿ ಮಕ್ಕಳ ವಿಕಲತೆಯನ್ನು ಗುರುತಿಸಿ ಅವರ ಆಸಕ್ತಿ ಹಾಗೂ ಅಭಿರುಚಿಗೆ ತಕ್ಕಂತೆ ಮಕ್ಕಳನ್ನು ಪ್ರೋತ್ಸಾಹಿಸಬೇಕು ಎಂದು ತಿಪಟೂರಿನ ಬದುಕು ಸಂಸ್ಥೆಯ ನಂದಕುಮಾರ್ ಸಲಹೆ ನೀಡಿದರು.

ತಾಲ್ಲೂಕಿನ ಹಾಲುಗೊಣದ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣ ದೋಷ ಮಕ್ಕಳ ವಸತಿ ಶಾಲೆಯಲ್ಲಿ ನಡೆದ ವಿಶ್ವ ಅಂಗವಿಕಲ ಮಕ್ಕಳ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಂಗವಿಕಲ ಮಕ್ಕಳಿಗಾಗಿ ವಿಶೇಷ ಶಾಲೆಗಳ ಅವಶ್ಯಕತೆ ಇದೆ. ಸರ್ಕಾರದ ಸವಲತ್ತುಗಳು ಅಂಗವಿಕಲ ಮಕ್ಕಳಿಗೆ ಸಿಗುವಂತೆ ಮುತುವರ್ಜಿ ವಹಿಸಬೇಕು ಎಂದರು.

ಗ್ರಾಮಸ್ಥ ಎಚ್.ಎಂ.ಪ್ರಕಾಶ್ ಮಾತನಾಡಿ, ಹಾಲುಗೊಣದಲ್ಲಿ ವಿಶೇಷ ವಿಕಲಚೇತನ ಶಾಲೆಯನ್ನು ಪ್ರಾರಂಭಿಸಿರುವುದು ಸಂತಸದ ವಿಷಯ. ಶಾಲೆಯಲ್ಲಿ ಮಕ್ಕಳಿಗೆ ಉತ್ತಮ ವಿದ್ಯಾಭ್ಯಾಸದೊಂದಿಗೆ ಸ್ವಾವಲಂಬಿಗಳಾಗಿ ಬದುಕಲು ಧೈರ್ಯ, ಸ್ಫೂರ್ತಿ ತುಂಬಬೇಕು ಎಂದರು.

ಸಂಸ್ಥೆಯ ಅಧ್ಯಕ್ಷ ಚಂದ್ರಶೇಖರಯ್ಯ ಮಾತನಾಡಿ, ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣ ದೋಷವುಳ್ಳ ಮಕ್ಕಳ ವಸತಿ ಶಾಲೆಯು ಶ್ರವಣ ದೋಷವುಳ್ಳ ಮಕ್ಕಳ ಭವಿಷ್ಯ ಉಜ್ವಲವಾಗಲು ಎಲ್ಲ ರೀತಿಯ ಕಾರ್ಯಕ್ರಮ ಏರ್ಪಡಿಸುವುದು. ಆದರೆ ಎಲ್ಲರ ಸಹಕಾರ, ಹಾರೈಕೆ ಬೇಕು ಎಂದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಸದಸ್ಯ ರವೀಶ್, ನಿವೃತ್ತ ಶಿಕ್ಷಕ ಮಹಲಿಂಗಯ್ಯ ಉಪಸ್ಥಿತರಿದ್ದರು.



ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಾಲುಗೊಣದ ಸಿದ್ದರಾಮೇಶ್ವರ ವಾಕ್ ಮತ್ತು ಶ್ರವಣ ದೋಷವುಳ್ಳ ಮಕ್ಕಳ ವಸತಿ ಶಾಲೆಯಲ್ಲಿ ನಡೆದ ವಿಶ್ವ ಅಂಗವಿಕಲ ಮಕ್ಕಳ ದಿನವನ್ನು ಈಚೆಗೆ ಆಚರಿಸಲಾಯಿತು